MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 246 | ಸೋಮವಾರ : 14-07-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 246 | MONDAY : 14-07-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ತಿಂಥಣಿ ಬ್ರಿಡ್ಜ್ ನಿರ್ಮಾಣದ ಯೋಜನೆಗೆ

# ಕೆ ಎಸ್ ಎನ್ ಕಂಕಣ



ಭತ್ತದ ನಾಡು ಇಂದು ಬತ್ತಿ ಹೋಗುತ್ತಿದೆ, ದೇಶಕ್ಕೆ ಅನ್ನ ನೀಡುತ್ತಿದ್ದ ಪ್ರದೇಶದಲ್ಲಿ ಇಂದು ಆಹಾಕಾರ ಉಂಟಾಗುತ್ತಿದೆ ಇದಕ್ಕೆ ಪ್ರಮುಖ ಕಾರಣ ನಮ್ಮ ಭಾಗದ ನೀರಾವರಿ ಯೋಜನೆಗಳನ್ನು ಜಾರಿಗೆ ತರಲು ಅಧಿಕಾರಕ್ಕೆ ಬಂದ ಎಲ್ಲಾ ಪಕ್ಷಗಳು ಹಾಗೂ ರಾಜಕಾರಣಿಗಳು ನಿರ್ಲಕ್ಷತನ ಮಾಡಿದ್ದೂ ಇಂದು ಕುಡಿಯಲು ನೀರು ಕೂಡ ಸರಿಯಾಗಿ ಸಿಗುತ್ತಿಲ್ಲ ಹೀಗೆ ಮುಂದುವರೆದರೆ ಈ ಭಾಗದಲ್ಲಿ ನೀರಿಗಾಗಿ ನೀರಿಗಾಗಿ ಆಹಾಕಾರ ತೀವ್ರಗೊಳ್ಳಲಿದೆ,

ಇಂತಹ ಪರಿಣಾಮಕಾರಿಯಾಗಿರುವಂತ ಸಮಸ್ಯೆ ಒಂದು ಕಡೆಯಾದರೆ, ಆರೋಗ್ಯ, ಶೈಕ್ಷಣಿಕ ದೃಷ್ಟಿಯಿಂದ ನಮ್ಮ ಜಿಲ್ಲೆಯಲ್ಲಿ ಏಮ್ಸ್ ನಿರ್ಮಾಣವಾಗಬೇಕೆಂದು ಕನಸು ಕಂಡಿರುವ ಮಾಜಿ ಸಚಿವರಾದ ಕೆ. ಶಿವನಗೌಡ ನಾಯಕ ಅವರು ಒಂದು ದಿಟ್ಟ ಹೆಜ್ಜೆ ಇಟ್ಟಿದ್ದಾರೆ. ರಾಯಚೂರು ಜಿಲ್ಲೆಯ ಮಾನ್ವಿ, ಸಿಂಧನೂರು, ದೇವದುರ್ಗ,ಮಸ್ಕಿ, ಸಿರಿವಾರ,ರಾಯಚೂರು ಗ್ರಾಮೀಣ,ಸೇರಿದಂತೆ ಕೊಪ್ಪಳ ಜಿಲ್ಲೆಯ ಗಂಗಾವತಿ ಕಾರಟಗಿ ಕನಕಗಿರಿ ತಾಲೂಕುಗಳಿಗೆ ನವಲಿ ಜಲಾಶಯ ಯೋಜನೆಯಿಂದ ಶಾಶ್ವತ ಪರಿಹಾರ ಸಿಗುತ್ತದೆ.

ತಿಂಥಣಿ ಬ್ರಿಡ್ಜ್ ನಿರ್ಮಾಣದಿಂದ ದೇವದುರ್ಗ, ಸಿರಿವಾರ, ಅರಕೆರಾ,ರಾಯಚೂರು ನಗರ, ರಾಯಚೂರು ಗ್ರಾಮೀಣ,ಯಾದಗಿರಿ ಜಿಲ್ಲೆಯ ಶಹಪುರ, ಜೇವರ್ಗಿ, ಹುಣಸಗಿ ತಾಲೂಕಗಳಿಗೆ ಶಾಶ್ವತ ನೀರಾವರಿ ಯೋಜನೆ ಹಾಗೂ ಗುಲ್ಬರ್ಗಕ್ಕೆ ಕುಡಿಯುವ ನೀರು ಯೋಜನೆ ಕಳೆದ 40 ವರ್ಷಗಳ ಹಿಂದೆ ಎರಡು ಬೆಳೆ ಬೆಳೆಯಲು ನೀರು ಇದ್ದಿದ್ದು ಈಗ ಇಲ್ಲಾ ಹಾಗೂ ಲಕ್ಷಾಂತರ ಹೆಕ್ಟರ್ ಬರಡು ಭೂಮಿಗೆ ಶಾಶ್ವತ ನೀರಾವರಿ ಯೋಜನೆ, ಆರೋಗ್ಯ ಹಾಗೂ ಶೈಕ್ಷಣಿಕವಾಗಿ ಏಮ್ಸ್ ರಾಯಚೂರು ಜಿಲ್ಲೆಯಲ್ಲಿ ನಿರ್ಮಾಣವಾಗಬೇಕೆಂದು ಕಂಕಣಬದ್ಧರಾಗಿ ಮಾಜಿ ಸಚಿವರಾದ ಕೆ.ಶಿವನಗೌಡ ನಾಯಕ ನಿಂತಿದ್ದಾರೆ.

ಕೆಎಸ್ ಎನ್ ಸೇವಾ ಸಂಸ್ಥೆಯು ಮಾಜಿ ಸಚಿವ ಕೆ.ಶಿವನಗೌಡ ನಾಯಕ್ ಅವರ ಹುಟ್ಟಿದ ದಿನವನ್ನು ಹುಟ್ಟುಹಬ್ಬವನ್ನಾಗಿ ಪ್ರತಿ ವರ್ಷ ವಿಭಿನ್ನ, ವಿಶಿಷ್ಟ ಸಾಮಾಜಿಕವಾಗಿ ತಮ್ಮ ಹುಟ್ಟು ಹಬ್ಬದಂತೆ ವಿವಿಧ ಕಾರ್ಯಕ್ರಮಗಳು,ರಕ್ತದಾನ ಶಿಬಿರ,ನೇತ್ರಾ ತಪಾಸಣೆ ಮಾಡುವ ಮೂಲಕ ಆಚರಣೆ ಮಾಡುವ ಮಾಜಿ ಸಚಿವರಾದ ಕೆ.ಶಿವನಗೌಡ ನಾಯಕ್ ಅವರು ಕೊನೆಯ ವರ್ಷ ತಮ್ಮ ಹುಟ್ಟು ಹಬ್ಬ ಆಚರಣೆ ವೇಳೆ ಹೇಳಿದಂತೆ ಸರ್ವಧರ್ಮ ಸಾಮೂಹಿಕ ವಿವಾಹ ಮಾಡಿಸಿದ ಧೀಮಂತ ನಾಯಕ, ಈಗ ಈ ವರ್ಷ ತಮ್ಮ ಹುಟ್ಟು ಹಬ್ಬದ ದಿನ ಸಾಮಾಜಿಕವಾಗಿ ಹಾಗೂ ರೈತರಿಗೆ ಅನುಕೂಲವಾಗುವ ದೃಷ್ಟಿಯನ್ನು ಇಟ್ಟುಕೊಂಡು ಶಾಶ್ವತ ನೀರಾವರಿ ಯೋಜನೆಗಳ ಬಗ್ಗೆ ಪಕ್ಷಾತೀತವಾಗಿ ಬೃಹತ್ ಜನಾಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಂಡು ಆ ಬೃಹತ್ ಕಾರ್ಯಕ್ರಮದಲ್ಲಿ ಹಕ್ಕುತ್ತಾಯ ಮಂಡನೆ ಮಾಡಬೇಕು ಎನ್ನುವ ಸಂಬಂಧ ಈ ವರ್ಷ ಸರಳ ರೀತಿಯಲ್ಲಿ ಹುಟ್ಟುಹಬ್ಬ ಆಚರಣೆ ಮಾಡಿಕೊಂಡು ಮುಂದಿನ ಕೆಲವೇ ದಿನಗಳಲ್ಲಿ ಬೃಹತ್ ಜನಾಂದೋಲನ ಕಾರ್ಯಕ್ರಮವನ್ನು ಕೆ ಎಸ್ ಎನ್ ಸೇವಾ ಸಂಸ್ಥೆ ವತಿಯಿಂದ ಮಾಡಿ ಸಾರ್ಥಕ ಮನೋಭಾವ ತುರುವ ದೃಷ್ಟಿಯನ್ನು ಇಟ್ಟುಕೊಂಡಿದ್ದಾರೆ.

**ಬಿಸಿಲ ನಾಡಿನಲ್ಲಿರುವ ಕೃಷ್ಣಾ ನದಿಯ ತಿಂಥಿಣಿ ಬ್ರಿಡ್ಜ್ ಜಲಾಶಯ ಯೋಜನೆಯಿಂದಾಗಿ ರಾಯಚೂರು - ಯಾದಗಿರಿ ಉಭಯ ಜಿಲ್ಲೆಯ ಹಲವು ತಾಲೂಕುಗಳಿಗೆ ಶಾಶ್ವತ ನೀರಾವರಿಯನ್ನು ಒದಗಿಸುವ ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು ,ಜಿಲ್ಲೆಯ ದೇವದುರ್ಗ, ನೂತನ ತಾಲೂಕು ಅರಕೇರಾ, ರಾಯಚೂರು,ರಾಯಚೂರು ಗ್ರಾಮಾಂತರ, ಯಾದಗಿರಿ, ಸುರುಪುರ , ಶಹಾಪುರ , ಹುಣಸಗಿ, ಜೇವರ್ಗಿ ತಾಲೂಕಿನ ಬರಡು ಭೂಮಿಗೆ ನೀರಾವರಿ ಸಿಂಚನ ಒದಗಿಸಿದರೆ, ಕಲುಬುರಗಿ ನಗರಕ್ಕೆ ಶಾಶ್ವತ ಕುಡಿಯುವ ನೀರು ಒದಗಿಸುವ ಮೂಲಕ , ಈ ಭಾಗದ ರೈತರ ಮೂರು ದಶಕದ ಕನಸು ನನಸು ಮಾಡಲು ಶಿವನಗೌಡ ನಾಯಕರು ಸಜ್ಜಾಗಿದ್ದಾರೆ.ತಮ್ಮ ಹುಟ್ಟು ಹಬ್ಬದ ಪ್ರಯುಕ್ತ ಮುಂದೆ ನಡೆಯುವ ಪಕ್ಷತೀತವಾಗಿ ಜಿಲ್ಲೆಯಲ್ಲಿ ಬೃಹತ್ ಜನಾಂದೋಲನ ಕಾರ್ಯಕ್ರಮದಲ್ಲಿ ಹಕ್ಕೋತ್ತಾಯ ಮಂಡನೆ ಮಾಡಲು ಕೆ ಎಸ್ ಎನ್ ಸೇವಾ ಸಂಸ್ಥೆ ಮಹತ್ತರ ಹೆಜ್ಜೆ ಇಟ್ಟಿದ್ದಾರೆ.**

### ಜುಲೈ 14: ಕೆ.ಶಿವನಗೌಡ ನಾಯಕ ಅವರ 48ನೇ ಹುಟ್ಟುಹಬ್ಬ

ಜಿಲ್ಲೆಯ ಕೆ ಎಸ್ ಎನ್ ಸಾಮಾಜಿಕ ಸೇವಾ ಸಂಸ್ಥೆ ಕಳೆದ ಒಂದು ದಶಕದಿಂದಲೂ ಕೂಡ ಸಾಮಾಜಿಕ ಕಳಕಳಿಯುಳ್ಳ ಕಾರ್ಯಗಳನ್ನ ಮಾಡುತ್ತಾ ಬಂದಿದ್ದೆ,ಅದರ ಮುಂದುವರೆದ ಭಾಗವಾಗಿ ಪಕ್ಷಾತೀತವಾಗಿ ಸಾಮಾಜಿಕ ಬದ್ಧತೆಯುಳ್ಳ ರಾಜಕಾರಣಿ ಮಾಜಿ ಸಚಿವರಾದ ಕೆ.ಶಿವನಗೌಡ ನಾಯಕ ಅವರ ಹುಟ್ಟುಹಬ್ಬ ಜುಲೈ 14ರಂದು ಇದ್ದು ಸರಳವಾಗಿ ಹಾಗೂ ಸಾಮಾಜಿಕವಾಗಿ ಆಚರಣೆ ಮಾಡುತ್ತಿದ್ದಾರೆ ಆದರೆ ಅದರ ಪ್ರಯುಕ್ತ ರಾಯಚೂರು ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಸಾಮಾಜಿಕ ಹಿತದೃಷ್ಟಿಯಿಂದ ಅವರ ಹುಟ್ಟುಹಬ್ಬವನ್ನು ಮುಂದುವೆಚ್ಚ ಕರ್ಮ ಮಾಡಿ ಆಡಂಬರ ಮಾಡದೆ ಅದೇ ಖರ್ಚಿನಲ್ಲಿ ಸಾರ್ಥಕ ಮನೋಭಾವದಿಂದ ಆಚರಣೆ ಮಾಡಿ ಜಿಲ್ಲೆಯ ಸಮಗ್ರ ನೀರಾವರಿ ಹಾಗೂ ಏಮ್ಸ್‌ಗಾಗಿ ಹಾಕುತ್ತಾಯ ಮಂಡನೆ ಮಾಡಲು ನೂರು ಹೆಜ್ಜೆ ಹಾಕಿ, ಯಾವ ಸರ್ಕಾರದ ವಿರುದ್ಧವಲ್ಲದೆ ಪಕ್ಷಾತೀತವಾಗಿ, ವೈಯಕ್ತಿಕ ಸ್ವ ಪ್ರತಿಷ್ಠೆಗಾಗಿ ಅಲ್ಲದೇ ಸಾರ್ವಜನಿಕವಾಗಿ ಜನಾಂದೋಲನ ಕಾರ್ಯಕ್ರಮ ಮಾಡುವ ದೃಷ್ಟಿಯಿಂದ ಪ್ರಖ್ಯಾತ ಮಹಾರಾಷ್ಟ್ರ ಹಾಗೂ ಕರ್ನಾಟಕದ ಇಬ್ಬರ ಸ್ವಾಮೀಜಿಗಳ ಸಮ್ಮುಖದಲ್ಲಿ ನೀರಾವರಿ ಹಾಗೂ ಏಮ್ಸ್ ಬಗ್ಗೆ ಸಂಪೂರ್ಣ ವಿಷಯ ಮಂಡಿಸಿ ಹಾಕ್ಕೋತಾಯ ಮಾಡುವುದಾಗಿ ಪಣತೊಟ್ಟಿರುವ ಮಾಜಿ ಸಚಿವರಾದ ಕೆ.ಶಿವನಗೌಡ ನಾಯಕ ಅವರು ಜನ ಹಿತವೇ ನಮ್ಮ ಹಿತ ಎಂದು ತಿಳಿದು ಜುಲೈ 14ರಂದು ಸರಳವಾಗಿ ತಮ್ಮ ಹುಟ್ಟುಹಬ್ಬ ಆಚರಣೆ ಮಾಡಿಕೊಳ್ಳುತ್ತಿದ್ದಾರೆ.


## ಏಮ್ಸ್ ಜಾರಿಗೆ ಪಣ

ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ಜಿಲ್ಲೆ ಎಂಬ ಹಣೆಪಟ್ಟಿ ಹೊಂದಿರುವ ರಾಯಚೂರು ಜಿಲ್ಲೆ ಹಾಗೂ ಪಕ್ಕದಲ್ಲಿರುವ ಜಿಲ್ಲೆಯಲ್ಲೂ ಅಪೌಷ್ಟಿಕತೆಯಿಂದ ನರಳುವವರ ಸಂಖ್ಯೆ ಹೆಚ್ಚಾಗಿದ್ದು ಅದರ ಪರಿಣಾಮವಾಗಿ ತಾಯಿ ಮತ್ತು ಶಿಶುಗಳ ಮರಣ ಪ್ರಮಾಣ ಹೆಚ್ಚಾಗುತ್ತಿವೆ, ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಮೊದಲ ಹೆಜ್ಜೆಯಾಗಿ ರಾಯಚೂರಿಗೆ ಏಮ್ಸ್ ಮಂಜೂರು ಆಗಲೇಬೇಕು ಹಾಗಾಗಿ ಏಮ್ಸ್ ಅಂತಹ ದೊಡ್ಡ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಅಪೌಷ್ಟಿಕತೆಯನ್ನು ತಪ್ಪಿಸಬಹುದು,ಆರ್ ಟಿ ಪಿ ಎಸ್ ಮತ್ತು ವೈ ಟಿ ಪಿ ಎಸ್ ಉಷ್ಣ ವಿದ್ಯುತ್ ಸ್ಥಾವರಗಳಿಂದ ನಿರಂತರವಾಗಿ ಹೊರ ಬೀಳುತ್ತಿರುವ ಹಾರೋಬೂದಿ ಗಾಳಿಯಲ್ಲಿ ಸೇರಿಕೊಂಡು ಜನರಲ್ಲಿ ಶ್ವಾಸಕೋಶ ಸಂಬಂಧಿತ ರೋಗಗಳು ಹೆಚ್ಚಾಗಿ ಬರುತ್ತಿದ್ದು ಹಾಗೂ ಮುಂದೆ ಬರುವ ಸವಾಲುಗಳನ್ನು ಎದುರಿಸಲು ರಾಯಚೂರು ಜಿಲ್ಲೆಗೆ ಏಮ್ಸ್ ಬೇಕೆಂದು ಕೆ ಎಸ್ ಎನ್ ಸೇವಾ ಸಂಸ್ಥೆ ಹಾಗೂ ಕೆ. ಶಿವನಗೌಡ ನಾಯಕ ಅವರು ಪಣತೊಟ್ಟಿದ್ದಾರೆ.

## ಜಿಲ್ಲೆಯ ಅಭಿವೃದ್ಧಿ ರಾಜಕಾರಣದಲ್ಲಿ ಕೆ.ಶಿವನಗೌಡ ನಾಯಕ

ರಾಯಚೂರು ಜಿಲ್ಲೆಯಲ್ಲಿ ಈ ಹಿಂದಿನಿಂದಲೂ ಹಲವು ಮಹನೀಯರು ಶಾಸಕ, ಸಂಸದ ಹಾಗೂ ಸಚಿವ ಹುದ್ದೆಗಳನ್ನು ನಿಭಾಯಿಸಿ ಜಿಲ್ಲೆಯ ಅಭಿವೃದ್ಧಿಗೆ ಮಹೋನ್ನತ ಕೊಡುಗೆ ನೀಡಿದ್ದಾರೆ. ಕಳೆದ ಎರಡು ದಶಕಗಳ ರಾಜಕಾರಣವನ್ನು ಅವಲೋಕಿಸಿದಾಗ ಅಭಿವೃದ್ಧಿ ವಿಚಾರಕ್ಕೆ ದೇವದುರ್ಗದ ಮಾಜಿ ಸಚಿವ ಕೆ.ಶಿವನಗೌಡ ನಾಯಕ ಹೆಸರು ಮುಂಚೂಣಿಗೆ ಬರುತ್ತದೆ. ಕೆ.ಶಿವನಗೌಡ ನಾಯಕ ಅವರ ರಾಜಕೀಯ ಧೋರಣೆಗಳಿಗಿಂತ ಅವರಿಗಿರುವ ಅಭಿವೃದ್ಧಿ ಪರ ಇಚ್ಛಾಶಕ್ತಿ ಹಾಗೂ ಕಾಳಜಿಯನ್ನು ದೇವದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಅವರು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ಸಾಕ್ಷೀಕರಿಸುತ್ತವೆ. ಚೀಕಲಪರ್ವಿ ಬಳಿ ತುಂಗಭದ್ರಾ,ನದಿಗೆ ಸೇತುವೆ ನಿರ್ಮಾಣ, ಕಲ ಲಾದಿಂದ ಸಿಂಧನೂರು ವರೆಗೆ ಚತುಷ್ಪಥ ರಸ್ತೆ, ಪ್ರಮುಖವಾಗಿ ಐ ಐ ಐ ಟಿ ಹಾಗೂ ವಿಮಾನ ನಿಲ್ದಾಣ ನಿರ್ಮಾಣದಂತಹ ಮಹತ್ವದ ಯೋಜನೆಗಳ ಪರಿಕಲ್ಪನೆ ಕೆ.ಶಿವನಗೌಡ ನಾಯಕ ಅವರು ರಾಯಚೂರು ಜಿಲ್ಲೆಯ ಸಮಗ್ರ ಅಭಿವೃದ್ಧಿ ಬಗ್ಗೆ ಹೊಂದಿರುವ ಇಚ್ಛಾಶಕ್ತಿಯನ್ನು ಪುಷ್ಠಿಕರಿಸುತ್ತವೆ.

ಆದರೆ ಮತದಾರರು ಚುನಾವಣೆ ಸಂದರ್ಭಗಳಲ್ಲಿ ಅಭಿವೃದ್ಧಿಪರ ಯೋಜನೆಗಳನ್ನು ಪರಿಗಣಿಸದೆ ರಾಜಕೀಯ ಪಕ್ಷಗಳ ಆ ಕ್ಷಣದ ಭರವಸೆಗಳು, ಅನುಕಂಪಗಳಿಗೆ ಬಲಿಯಾಗಿ ಕೆ.ಶಿವನಗೌಡ ನಾಯಕ ಅವರಂತಹ ಕ್ರಿಯಾಶೀಲ ವ್ಯಕ್ತಿಗಳನ್ನು ತಿರಸ್ಕರಿಸುವುದು ಅಭಿವೃದ್ಧಿಪರ ರಾಜಕಾರಣಕ್ಕೆ ಹಿನ್ನಡೆ ಎಂದು ಅರ್ಥೈಸಿಕೊಳ್ಳಬಹುದು. ನಮ್ಮ ಜನರಲ್ಲಿ ರಾಜಕೀಯ ಪ್ರಜ್ಞೆಯ ಜೊತೆ ಜೊತೆಗೆ ಅಭಿವೃದ್ಧಿಪರ ಧೋರಣೆ ಜಾಗೃತಿಯಾಗುವ ಮೂಲಕ ಚುನಾವಣಾ ಸಮಯದಲ್ಲಿನ ಕ್ಷುಲ್ಲಕ ಅಪಪ್ರಚಾರದ ಸಂಗತಿಗಳನ್ನು ತಿರಸ್ಕರಿಸಿ, ವ್ಯಕ್ತಿಯ ಅಭಿವೃದ್ಧಿ ಕಾರ್ಯಗಳಿಗೆ ಮನ್ನಣೆ ನೀಡಿ ಬೆಂಬಲಿಸುವ ಮನೋಭಾವ ಮೂಡಬೇಕು. ಆಗ ಮಾತ್ರ ರಾಜಕೀಯ ನಾಯಕರಿಂದ ಇನ್ನೂ ಹೆಚ್ಚಿನ ಪ್ರಮಾಣದ ಅಭಿವೃದ್ಧಿಪರ ರಾಜಕಾರಣದ ನಿರೀಕ್ಷೆ ಸಾಧ್ಯ ಎಂಬುದು ರಾಜಕೀಯ ವಿಶ್ಲೇಷಕರ ಅಭಿಮತ. ದೀರ್ಘಾವಧಿಯ ರಾಜಕೀಯ ಭವಿಷ್ಯ ಹೊಂದಿರುವ ಕೆ.ಶಿವನಗೌಡ ನಾಯಕ ರಂತಹ ಯುವ ನಾಯಕರು ಕೂಡ ತಮ್ಮ ಅಭಿವೃದ್ಧಿಪರ ರಾಜಕಾರಣದ ಜೊತೆಗೆ ಚುನಾವಣಾ ಸಂದರ್ಭಗಳಲ್ಲಿ ಎದುರಾಳಿಗಳ ಸಂಭವನೀಯ ಸವಾಲುಗಳ ಬಗ್ಗೆ ಸದಾ ಎಚ್ಚರಿಕೆಯ ಹೆಜ್ಜೆಗಳನ್ನು ಇಡುವ ಮೂಲಕ ನಿರಂತರವಾಗಿ ಅಧಿಕಾರದಲ್ಲಿರಲು ಪ್ರಯತ್ನಿಸುವ ಅವಶ್ಯಕತೆ ಇದೆ.



# ಅಭಿಮಾನಿಗಳಿಂದ ಚಲನಚಿತ್ರ ನಟ ಡಾ. ಶಿವರಾಜ್ ಕುಮಾರ್ ಹುಟ್ಟು ಹಬ್ಬ ಆಚರಣೆ

ಯುವ ಮಾರ್ಗ ಸುದ್ದಿ



**ಮಾನ್ವಿ,ಜು.14–**ಪಟ್ಟಣದ ನೆರಳು ಆನಾಥರ ಹಾಗೂ ವೃದ್ದರ ಆಶ್ರಮದಲ್ಲಿ ಚಲನ ಚಿತ್ರ ನಟ ಡಾ. ಶಿವರಾಜ್ ಕುಮಾರ್ ಹುಟ್ಟು ಹಬ್ಬದ ಅಂಗವಾಗಿ ತಾಲೂಕು ಶಿವರಾಜ್ ಕುಮಾರ ಹಾಗೂ ಅಪ್ಪು ಅಭಿಮಾನಿಗಳು ಅಲ್ಲಿನ ನಿವಾಸಿಗಳಿಗೆ ಆಹಾರ ಹಾಗೂ ಹಣ್ಣುಗಳನ್ನು ವಿತರಿಸಿದರು.

ಅಪ್ಪು ವೃತ್ತದ ಬಳಿ ಕೇಕ್ ಕತ್ತರಿಸುವ ಮೂಲಕ ಸರಳವಾಗಿ ಹುಟ್ಟು ಹಬ್ಬವನ್ನು ಶಿವರಾಜ್ ಕುಮಾರ್ ಅಭಿಮಾನಿಗಳು ಮತ್ತು ಅಪ್ಪು ವತಿಯಿಂದ ಆಚರಿಸಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಹಾಗೂ ತಾಯಿ ಮಕ್ಕಳ ಆಸ್ಪತ್ರೆಯಲ್ಲಿನ ರೋಗಿಗಳಿಗೆ ಹಾಲು ಹಣ್ಣುಗಳನ್ನು ವಿತರಿಸಿದರು. ಅಪ್ಪು ಅಭಿಮಾನಿ ಬಳಗದ ಗೌರವಾಧ್ಯಕ್ಷರಾದ ಕೆ. ಸಾಜಿದ್ ಪಾಷಾ, ತಾಲ್ಲೂಕ ಅಧ್ಯಕ್ಷರಾದ ರೇಣುಕರಾಜ್, ಮಾಜಿ ಅಧ್ಯಕ್ಷ ರಾದ ರಾಜೇಶ್, ಪ್ರಧಾನ ಕಾರ್ಯದರ್ಶಿ ಬಸವ ರಾಜ್ ಬಂಟಿ, ಖಜಾಂಚಿ ಖಾಜಾ, ಕೊಂಡಯ್ಯ ನಾಯಕ. ನಾಯುಡು ನಾಯಕ., ಹನುಮೇಶ್ ನಾಯಕ್. ರಂಗನಾಥ್ ನಾಯಕ. ಹನುಮೇಶ ನಾಯಕ. ಬಸವ ರಾಜ್ ಸ್ವಾಮಿ ಯಲ್ಲಪ್ಪ ನಾಯಕ. ಯಲ್ಲಪ್ಪ. ವೆಂಕಿ ಮಾಸ್. ಪ್ರಶಾಂತ್ ಭಜಂತ್ರಿ. ನಾಗರಾಜ್ ಕುಂಬಾರ. ಮುಸ್ತಾಫಾ. ಶಬೀ ರ್.ಇಕ್ಬಾಲ್. ಸೇರಿದಂತೆ ಇನ್ನಿತರರು ಇದ್ದರು.

# ಮಂತ್ರಾಲಯದಲ್ಲಿ ಸ್ನಾನಕ್ಕೆ ತೆರಳಿದ್ದ ಮೂವರು ಯುವಕರು ನೀರುಪಾಲು

**ರಾಯಚೂರು,ಜು.13–** ರಾಯರ ದರ್ಶನಕ್ಕೆ ಮಂತ್ರಾಲಯಕ್ಕೆ ತೆರಳಿದ್ದ ರಾಜ್ಯದ ಏಳು ಭಕ್ತರ ಪೈಕಿ ಮೂವರು ತುಂಗಭದ್ರಾ ನದಿ ಪಾಲಾಗಿರುವ ಹೃದಯ ವಿದ್ರಾವಕ ಘಟನೆ ನಡೆದಿದೆ. ನದಿ ಪಾಲಾದ ಯುವಕರನ್ನು ಕೊಡಗು ಜಿಲ್ಲೆಯ ಸಂಗಾಪುರ ಗ್ರಾಮದ ಅಜಿತ್‌ಕುಮಾರ್ (20), ಹಾಸನ ಜಿಲ್ಲೆ ಅರಸೀಕೆರೆಯವರಾದ ಸಚಿನ್ ಜಿ.ಕೆ. (20), ಪ್ರಮೋದ್ ಜಿ.ಎಂ. (20) ಎಂದು ಗುರುತಿಸಲಾಗಿದೆ.

ಇತರ ನಾಲ್ವರು ಸ್ನೇಹಿತರೊಂದಿಗೆ ಮಂತ್ರಾಲಯದ ರಾಘವೇಂದ್ರ ಶ್ರೀ?ಗಳ ದರ್ಶನ ಪಡೆಯಲು ಬಂದಿದ್ದ ಈ ಮೂವರು ಯುವಕರು ತುಂಬಿ ಹರಿಯುತ್ತಿದ್ದ ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಲು ಇಳಿದಾಗ ನೀರಿನಲ್ಲಿ ಕೊಚ್ಚಿಹೋಗಿದ್ದರು. ತಕ್ಷಣ ಸ್ಥಳಕ್ಕೆ ದಾವಿಸಿದ ಮಂತ್ರಾಲಯ ಠಾಣೆ ಪೊಲೀಸರು ಯುವಕರ ರಕ್ಷಣೆಗೆ ಮುಂದಾದರೂ ತುಂಬಿ ಹರಿಯುತ್ತಿದ್ದ ತುಂಗಭದ್ರಾ ನದಿಯಿಂದ ಅವರನ್ನು ರಕ್ಷಿಸಲು ಸಾಧ್ಯವಾಗಲಿಲ್ಲ.

ನಿರಂತರ ಕಾರ್ಯಾಚರಣೆ ನಂತರ ನೀರಿನಲ್ಲಿ ಕೊಚ್ಚಿಹೋಗಿದ್ದ ಮೂವರು ಯುವಕರ ಶವಗಳನ್ನು ಹೊರತೆಗೆದು ಮರಣೋತ್ತರ ಪರೀಕ್ಷೆಗಾಗಿ ಎಮಿಗೆಪುರಂ ಜನರಲ್ ಆಸ್ಪತ್ರೆ ಶವಾಗಾರಕ್ಕೆ ಸಾಗಿಸಲಾಗಿದೆ ಎಂದು ಮಂತ್ರಾಲಯ ಠಾಣೆ ಪೊಲೀಸರು ತಿಳಿಸಿದ್ದಾರೆ.



ಮೂವರು ಯುವಕರು ಸ್ನೇಹಿತರಾಗಿದ್ದು, ಪದವಿ ವ್ಯಾಸಂಗ ಮಾಡುತ್ತಿದ್ದರು. ಕಾಲೇಜಿಗೆ ರಜೆಯಿದ್ದ ಕಾರಣ ನಿನ್ನೆ ಮಂತ್ರಾಲಯಕ್ಕೆ ಬಂದು ರಾಯರ ದರ್ಶನ ಮಾಡಿ ನದಿ ಭಾಗಕ್ಕೆ ಹೋಗಿದ್ದರು. ಈ ವೇಳೆ ನೀರಿಗಿಳಿದಾಗ ಕಾಲು ಜಾರಿ ಕೊಚ್ಚಿಕೊಂಡು ಹೋದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಮಂತ್ರಾಲಯ ಠಾಣೆ ಪೊಲೀಸರು ಹಾಗೂ ಆಗ್ನಿಶಾಮಕ ಸಿಬ್ಬಂದಿ ಹಾಗೂ ಶ್ರೀಮಠದ ಸಿಬ್ಬಂದಿ ಇಂದು ಬೆಳಗ್ಗೆ ಮತ್ತೆ ನದಿಯಲ್ಲಿ ಹುಡುಕಾಟ ನಡೆಸಿದ ನಂತರ ಮೂವರ ಶವಗಳನ್ನು ನದಿಯಿಂದ ಹೊರತರಲಾಗಿದೆ.

# ಲಯನ್ಸ್ ಕ್ಲಬ್ ವತಿಯಿಂದ ಪ್ರಕೃತಿ ಅಭಿಯಾನ: ಡಾ.ರೋಹಿಣಿ ಮಾನ್ವಿಕಾರ್



ಯುವ ಮಾರ್ಗ ಸುದ್ದಿ

**ಮಾನ್ವಿ,ಜು.14–**ಪಟ್ಟಣದ ಗಾಂಧಿ ಮೆಮೋರಿಯಲ್ ಕಾಲೇಜ್ ಆವರಣದಲ್ಲಿ ಲಯನ್ಸ್ ಕ್ಲಬ್ ಮಾನ್ವಿ ವತಿಯಿಂದ ನಡೆದ ಪ್ರಕೃತಿ ಅಭಿಯಾನ ಅಂಗವಾಗಿ ಲಯನ್ಸ್ ಕ್ಲಬ್ ಪ್ರೀತಿ ಮನಸ್ಸುಗಳ ತಂಡದಿಂದ ಗಿಡ ನೆಡುವ ಕಾರ್ಯಕ್ರಮವನ್ನು ಡಾ.ರೋಹಿಣಿ ಮಾನ್ವಿಕಾರ್ ಉದ್ಘಾಟಿಸಿ ಮಾತನಾಡಿ ಪರಿಸರ ರಕ್ಷಣೆ ನಮ್ಮೆಲರ ಹೊಣೆಯಾಗಿದ್ದು ಮರಗಳು ಮಾನರಿಗೆ ಅಗತ್ಯವಿರುವ ಪ್ರಾಣವಾಯುವನ್ನು ನೀಡುತ್ತವೆ. ಪರಿಸರದ ಸುದಾರಣೆಯಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತವೆ. ಗಿಡಮರಗಳು ಇಲ್ಲದೆ ಇದ್ದಲ್ಲಿ ಮಾನವ ಜೀವಿಸುವುದು ಅತ್ಯಂತ ಕಷ್ಟವಾಗುತ್ತದೆ ಅದ್ದರಿಂದ ಶುದ್ದವಾದ ಅಮ್ಲಜನಕ ನೀಡುವಂತ ಗಿಡಗಳನ್ನು ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ನೆಟ್ಟು ಪೋಷಣೆ ಮಾಡುವುದು ಅಗತ್ಯವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆರ್.ಮುತ್ತುರಾಜ್ ಶೆಟ್ಟಿ, ಲಯನ್ಸ್ ಕ್ಲಬ್ ಅಧ್ಯಕ್ಷರಾದ ಎಂ.ನಾಗರಾಜ, ರಾಮರಾಜು, ಶಿವಮೂರ್ತಿ, ಎಂ. ರಾಮಲಿಂಗಪ್ಪ.ಕಾಲೇಜಿನಮ ಪ್ರಾಚಾರ್ಯರಾದ ಡಾ.ಈರಣ್ಣ ಮಾರ್ಲಟ್ಟಿ, ರಾಮಾಬಾಬು, ಎಂ.ಈರಣ್ಣ. ಡಾ.ಬಸವರಾಜ ಸಜ್ಜನ್, ಡಾ.ಸುರೇಶಬಾಬು, ಡಾ.ಅಶ್ವನಿಕಾಂತ. ಡಾ.ರಮ್ಯವೀರವಲ್ಲಿ, ಶರಣೆಗೌಡ ಯರದೊಡ್ಡಿ, ಬಿ.ರಾಘವೇಂದ್ರಶೆಟ್ಟಿ, ಬಸವರಾಜ ಶೆಟ್ಟಿ, ಹೆಚ್.ಮೌನೇಶ, ವೆಂಕಟೇಶಶೆಟ್ಟಿ, ಮಲ್ಲು ಆರ್ಜುನ, ಸೇರಿದಂತೆ ಗಾಂಧಿ ಮೆಮೋರಿಯಲ್ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಇದ್ದರು.

# ಪುರಸಭೆ ಅನುದಾನ ದುರ್ಬಳಕೆ ಆದರೆ ಅಧಿಕಾರಿಗಳಿಗೆ ಸೂಕ್ತ ಕ್ರಮ : ಸಚಿವ ರಹೀಂ ಖಾನ್

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜು.13–** ಪುರಸಭೆ ವ್ಯಾಪ್ತಿಯಲ್ಲಿ ಸರ್ಕಾರದ ಹಣ ದುರ್ಬಳಕೆ ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಪೌರಾಡಳಿತ ಸಚಿವ ರಹೀಂಖಾನ್ ಹೇಳಿದರು.

ಪಟ್ಟಣದ ವಿಧಾನ ಪರಿಷತ್ ಸದಸ್ಯ ಶರಣಗೌಡ ಪಾಟೀಲ್ ಬಯ್ಯಾಪೂರವರ ನಿವಾಸದಲ್ಲಿ ಸುದ್ದಿ ಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಜ್ಯ ಸರ್ಕಾರದಲ್ಲಿ ಹಣಕಾಸಿನ ತೊಂದರೆ ಇಲ್ಲ ಕುಡಿಯುವ ನೀರು, ರಸ್ತೆ, ಚರಂಡಿ ಸೇರಿ ಮೂಲಭೂತ ಸೌಕರ್ಯಕ್ಕಾಗಿ ಅನುದಾನ ಇದೆ ಎಂದರು. ಲಿಂಗಸುಗೂರು ಪುರಸಭೆಯಿಂದ ನಗರಸಭೆ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಬಂದಿದ್ದು, ಅಗಸ್ಟ್‌ನಲ್ಲಿ ನಡೆಯುವ ಅಧಿವೇಶನದ ಬಳಿಕ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ರಾಜ್ಯದಲ್ಲಿ ನಗರಸಭೆಗಳಾಗಿ ಮೇಲ್ದರ್ಜೆಗೇರಿಸಲು ಹಲವಾರು ಪ್ರಸ್ತಾವನೆಗಳು ಬಂದಿವೆ. ನಗರಸಭೆಯಾಗಿ ಮೇಲ್ದರ್ಜೆಗೇರಿಸಲು ಸಿಬ್ಬಂಧಿ, ಕಟ್ಟಡ, ಅನುದಾನ ಸೇರಿ ಹಲವು ಸವಲತ್ತುಗಳನ್ನು ಕೊಡಬೇಕು. ಇದಕ್ಕಾಗಿ ಹಣಕಾಸು ಇಲಾಖೆಯ ಸದಮತಿ ಬೇಕಾಗುತ್ತದೆ. ಈಗಾಗಲೇ ಲಿಂಗಸುಗೂರು ಫೈಲ್ ಹಣಕಾಸು ಇಲಾಖೆಯಲ್ಲಿದೆ. ಅಗಸ್ಟ್‌ನಲ್ಲಿ ನಡೆಯಲಿರುವ ಅಧಿವೇಶನದ ಬಳಿಕ ಮೇಲ್ದರ್ಜೆಗೇರಿಸುವ ಕ್ರಮಕ್ಕೆ ಮುಂದಾಗುವುದಾಗಿ ಸಚಿವರು ಹೇಳಿದರು.

ಪೌರಾಡಳಿತ ಕಾರ್ಮಿಕರ ಖಾಯಂಗೆ ಶೀಘ್ರ ಸೂಕ್ತ ಕ್ರಮ



ಕೈಗೊಳ್ಳಲಾಗುವುದು. ಪಟ್ಟಣ, ನಗರಗಳ ಅಭಿವೃದ್ಧಿಗೆ ರಾಜ್ಯದಲ್ಲಿದ್ದ ಎ ಖಾತಾ, ಬಿ ಖಾತಾ ಸಮಸ್ಯೆಗಳ ಶಾಶ್ವತ ಪರಿದಾರಕ್ಕೆ ಸರಕಾರ ಕ್ರಮ ಕೈಗೊಳ್ಳಲಿದೆ. ಅಕ್ರಮ ಸಕ್ರಮದಲ್ಲಿ ಎಲ್ಲರಿಗೂ ಖಾತಾ ಕೊಡುವ ವ್ಯವಸ್ಥೆ ಇದೆ. ಇದರ ಸದುಪಯೋಗ ಜನರು ಪಡೆದುಕೊಳ್ಳಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪೂರ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಪಾಮಯ್ಯ ಮುರಾರಿ, ನಗರ ಪ್ರಾಧಿಕಾರದ ಅದ್ಯಕ್ಷ ಭೂಪನಗೌಡ ಪಾಟೀಲ್, ಶಶಿಧರ ಪಾಟೀಲ್, ಸೋಮಶೇಖರ ಐದನಾಳ, ಸೋಮನಗೌಡ ಕರಡಕಲ್, ಅನೀಸ್ ಪಾಷಾ, ಪ್ರಮೋದ ಕುಲಕರ್ಣಿ, ಎಂ.ಜಿಲಾನಿ, ಪಟೇಲ್, ಚೆನ್ನಾರೆಡ್ಡಿ ಬಿರಾದಾರ ಸೇರಿ ಇತರರಿದ್ದರು.

# ಕರ್ನಾಟಕ ಭೂಷಣ' ಪ್ರಶಸ್ತಿ ಪ್ರದಾನ



**ಸೊರಬ,ಜು.13–**ಕರ್ನಾಟಕ ಮೀಡಿಯಾ ಕ್ಲಬ್ ನೀಡಲ್ಪಡುವ 2024–25 ನೇ ಸಾಲಿನ ರಾಜ್ಯ ಮಟ್ಟದ ಶ್ರೇಷ್ಠ ನಾಗರೀಕ ಸೇವಾ ಪ್ರಶಸ್ತಿ ಯಾದ 'ಕರ್ನಾಟಕ ಭೂಷಣ' ಪ್ರಶಸ್ತಿಯನ್ನು ಉದ್ರಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹೋಮೇಶಪ್ಪ. ಕೆ.ಅವರು ಆಡಳಿತ ಮತ್ತು ಕ್ರೀಡೆ ಕ್ಷೇತ್ರದಲ್ಲಿ ಸಾಧನೆ ಮಾಡಿ ಜನಪರ ಕಾಳಜಿ ಮತ್ತು ಅತ್ಯುತ್ತಮ ಸೇವೆ ಸಲ್ಲಿಸಿದ ನೆನಪಿಗಾಗಿ ಈ ಪ್ರಶಸ್ತಿಯನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಜುಲೈ 8 ರಂದು ನಡೆದ ಸಮಾರಂಭದಲ್ಲಿ ಪಡೆದುಕೊಂಡು ತಾಲೂಕಿನ ಕೀರ್ತಿ ಯನ್ನು ಹೆಚ್ಚಿಸಿದ್ದಾರೆ 'ಸಾಧಿಸುವ ಛಲ ಇರುವವರಿಗೆ ಯಶಸ್ಸು ಕಟ್ಟಿಟ್ಟ ಬುತ್ತಿ 'ಎನ್ನುವ ಮಾತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹೋಮೇಶಪ್ಪ ರವರಿಗೆಅನ್ವಯಿಸುತ್ತದೆ.ಅಧಿಕಾರಿಯಾದರೂ ಅವರು ಬೆಳಸಿಕೊಂಡ ಕ್ರೀಡಾಸಕ್ತಿಯಿಂದ ಅವರನ್ನು ಅವರು ನಂಬಿದ ಕ್ರೀಡೆ ಅತ್ಯುನ್ನತ ಗೌರವಕ್ಕೆ ತಂದಿದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೆ.ಹೋಮೇಶಪ್ಪ ಹೊಸನಗರ ತಾಲೂಕಿನ ಸುಳಗೋಡು ಗ್ರಾಮ ಪಂಚಾಯಿತಿ ಸೊರಬ ತಾಲೂಕಿನ ಶಕುನವಳ್ಳಿ,ಶಿಗ್ಗಾ,ಬೆನ್ನೂರು,ಹಳೇಸೊರಬ, ಹೆಗ್ಗೋಡು,ಗೆಂಡ್ಲಾ, ಹೊಸಬಾಳೆ ಸೇರಿದಂತೆ ತಾಲೂಕಿನ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ಅಭಿವೃದ್ಧಿ ಅಧಿಕಾರಿಯಾಗಿ ಉತ್ತಮ ಅಧಿಕಾರಿ ಎಂದು ಮನ್ನಣೆ ಪಡೆದಿರುವುದಲ್ಲದೆ ಚಿತ್ರದುರ್ಗ, ಕೋಲಾರ, ಬಳ್ಳಾರಿ, ಮಹಾರಾಷ್ಟ್ರದ ನಾಸಿಕ್, ಬೆಂಗಳೂರಿನ ಫ್ಯಾನ್ ಇಂಡಿಯಾ ,ಕೇರಳದ ಕೊಚ್ಚಿಕೊಡ್ ನಲ್ಲಿ ಮಂಗಳೂರಿನ ಸೌತ್ ಏಷನ್ ಮಾಸ್ಟರ್ ಅಥ್ಲೆಟಿಕ್ ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ರೀಲೇ, ಲಾಂಗ್ ಜಂಪ್, ವಿವಿಧ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದು ಇಲಾಖೆಗೆ ಕೀರ್ತಿ ತಂದಿರುತ್ತಾರೆ. ರಾಜ್ಯ ಮತ್ತು ರಾಷ್ಟ್ರ ಅಂತಾ ರಾಷ್ಟ್ರೀಯ ಮಟ್ಟದ ಕ್ರೀಡಾಕೂ ಟದಲ್ಲಿ ಭಾಗವಹಿಸಿ ಕ್ರೀಡಾ ಪದಕಗಳ 'ನ್ನು ಗೆದ್ದು ಹಲವು ಪದಕಗಳು ಮತ್ತು ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ ಇವರ ಈ ಸಾಧನೆಗೆ ಪೋಷಕರು ಸಹೋದ್ಯೋಗಿಗಳು, ಸ್ನೇಹಿತರು ಬಂಧುಗಳು ಬೆಂಬಲಿಸಿ ಸಾಧನೆಯನ್ನು ಪ್ರಶಂಸಿಸಿದ್ದಾರೆ.ಈ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಪರಮ ಪೂಜ್ಯ ಜಗದ್ಗುರು ಶ್ರೀ ವನಕಲ್ಲು ಮಲ್ಲೇಶ್ವರ ಮಹಾ ಸಂಸ್ಥಾನ ಮಠದ ಡಾ.ಬಸವ ರಮಾನಂದ ಸ್ವಾಮೀಜಿ, ಖ್ಯಾತ ಚಲನ ಚಿತ್ರರಂಗ ಭೂಮಿ ಕಲಾವಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು, ಕರ್ನಾಟಕ ರಾಜ್ಯ ಮಹಿಳಾ ಆಯೋ ಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌದರಿ, ಕರ್ನಾಟಕ ಪ್ರೆಸ್ ಕ್ಲಬ್ ಗೌರವಾಧ್ಯಕ್ಷ ರಮೇಶ್, ಪ್ರಧಾನ ಕಾ ರ್ಯದರ್ಶಿ ರಮೇಶ್.ಎಸ್. ಬಿ.ಸೇರಿದಂತೆ ಮೊದಲಾದವ ರಿದ್ದರು.

# ಜು.21 ನೀಟ್ ಯುಜಿ ಕೌನ್ಸೆಲಿಂಗ್

**ನವದೆಹಲಿ,ಜು.13–**ವೈದ್ಯಕೀಯ ಕೌನ್ಸೆಲಿಂಗ್ ಸಮಿತಿ ನೀಟ್ ಯುಜಿ 2025 ಕೌನ್ಸೆಲಿಂಗ್ ವೇಳಾಪಟ್ಟಿಯನ್ನು ಅಧಿಕೃತವಾಗಿ ಬಿಡುಗಡೆ ಮಾಡಿದ್ದು ಜುಲೈ 21 ರಿಂದ ಕೌನ್ಸಲಿಂಗ್ ಆರಂಭವಾಗಲಿದೆ. ಮೇ ತಿಂಗಳಲ್ಲಿ ನಡೆದ ನೀಟ್ ಯುಜಿ – 2025 ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳು ಇದೇ ಜುಲೈ 21 ರಿಂದ ಪ್ರಾರಂಭವಾಗುವ ಕೌನ್ಸೆಲಿಂಗ್ ರೌಂಡ್ 1 ಗೆ ಅಧಿಕೃತ ಜಾಲತಾಣ mcc.nic.in ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ ಎಂಸಿಸಿ ಅಧಿಸೂಚನೆಯ ಪ್ರಕಾರ, ಎಂಬಿಬಿಎಸ್, ಬಿಡಿಎಸ್ ಮತ್ತು ಬಿಎಸ್ಸಿ ನರ್ಸಿಂಗ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ನಾಲ್ಕು ಸುತ್ತುಗಳಲ್ಲಿ ನಡೆಸಲಾಗುವುದು, ಇದರಲ್ಲಿ ಶೇಕಡಾ 15 ರಷ್ಟು ಅಖಿಲ ಭಾರತ ಕೋಟಾ ಅಡಿಯಲ್ಲಿ ಸೀಟುಗಳಿಗೆ ಮತ್ತು ಎಐಐಎಂಎಸ್, ಜಿಪ್ಮರ್, ಬಿಎಚ್ಯು, ಎಎಂ ಯು ಮತ್ತು ಇಎಸ್‌ಐಸಿ ಸಂಸ್ಥೆಗಳಂತಹ ಕೇಂದ್ರ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಶೇಕಡಾ 100 ಸೀಟುಗಳಿಗೆ ಮಾಪ್–ಅಪ್ ಮತ್ತು ಖಾಲಿ ಹುದ್ದೆ ಸುತ್ತು ಸೇರಿವೆ.

ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಶೇಕಡಾ 15 ಅಖಿಲ ಭಾರತ ಕೋಟಾ ಅಡಿಯ ಸೀಟುಗಳು ,ಏಮ್ಸ್, ಜಿಪ್ಮರ್, ಬಿಎಚ್ಯು, ಎಎಂಯು ಮತ್ತು ಇಎಸ್‌ಐಸಿ ಸಂಸ್ಥೆಗಳಲ್ಲಿ ಶೇಕಡಾ 100 ರಷ್ಟು ಸೀಟುಗಳಿಗೆ ಕೌನ್ಸೆಲಿಂಗ್ ನಡೆಯಲಿದೆ, ಎಎಫ್‌ಎಂಸಿ ಮತ್ತು ಇಎಸ್‌ಐಸಿ ಐಪಿ ಕೋಟಾಮಕೇಂದ್ರೀಯ ಮತ್ತು ಡೀಮ್ಡ್ ವಿಶ್ವವಿದ್ಯಾಲಯ ಸೀಟುಗಳು,ನೀಟ್ ಯುಜಿ 2025 ಕೌನ್ಸೆಲಿಂಗ್ ರೌಂಡ್ ನಡೆಯಲಿದೆಎನ್‌ಎಂಸಿಯಿಂದ ಸೀಟ್ ಮ್ಯಾಟ್ರಿಕ್ಸ್ ಪರಿಶೀಲನೆ ಜುಲೈ 18 ರಿಂದ 19 ರಂದು ನಡೆಯಲಿದ್ದು ನೋಂದಣಿ ಮತ್ತು ಶುಲ್ಕ ಪಾವತಿ: ಜುಲೈ 21 ರಿಂದ ಜುಲೈ 28ರವರೆಗೆ ಅವಕಾಶ ಮಾಡಿಕೊಡಲಾಗಿದೆ ಆಯ್ಕೆ ಭರ್ತಿ ಮಾಡುವ ದಿನಾಂಕ: ಜುಲೈ 22 ರಿಂದ 28ರವರೆಗೆ ನಡೆಯಲಿದ್ದು ಆಯ್ಕೆ ಲಾಕಿಂಗ್ ಜುಲೈ 28 ರಿಂದ ನಡೆಯಲಿದೆ ಸೀಟು ಹಂಚಿಕೆ ಪ್ರಕ್ರಿಯೆ: ಜುಲೈ 29 ರಿಂದ ಜುಲೈ 30 ರಂದು ನಡೆಯಲಿದೆ ಎಂದು ತಿಳಿಸಲಾಗಿದೆ

# ಲೋಕ ಅದಾಲತ್: ಬಾಕಿ 16424 ಪ್ರಕರಣಗಳ ಇತ್ಯರ್ಥ

**ಬಳ್ಳಾರಿ, ಜು.13–** ಅಖಂಡ ಬಳ್ಳಾರಿ ಜಿಲ್ಲೆಯ 28 ನ್ಯಾಯ ಪೀಠಗಳಲ್ಲಿ ನಿನ್ನೆ ನಡೆದ ರಾಷ್ಟ್ರೀಯ ಲೋಕ ಅದಾಲತ್ ನಲ್ಲಿ ನ್ಯಾಯಾಲಯದಲ್ಲಿ ಬಾಕಿ ಉಳಿದಿದ್ದ, 25611ಪ್ರಕರಣಗಳನ್ನು ಕೈಗೆತ್ತಿಕೊಂಡು ಅದರಲ್ಲಿ 16424 ಪ್ರಕರಣಗಳ ಕಕ್ಷಿದಾರರಿಗೆ 34,31,97,228 ರೂ ಇತ್ಯರ್ಥ ಗೊಳಿಸಿದ ಮೊತ್ತವಾಗಿದೆ.

ಇನ್ನು ಪೂರ್ವ ದಾವೇ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 8,67,471 ಪ್ರಕರಣಗಳ ಪೈಕಿ 8,59, 362 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ಇತ್ಯರ್ಥ ಪಡಿಸಲಾದ ಒಟ್ಟು ಮೌಲ್ಯ 311ಕೋಟಿ, 33 ಲಕ್ಷದ, 76 ಸಾವಿರದ 853 ರೂ ಇತ್ಯರ್ಥಗೊಳಿಸಲಾದ ಮೊತ್ತವಾಗಿದೆ.

ವಿಮೆ, ನೀರಿನ ಬಿಲ್, ಬ್ಯಾಂಕ್ ಸಾಲ, ಮನೆ ಕರ, ಕೌಟುಂಬಿಕ ದೌರ್ಜನ್ಯ, ಜೀವನಾಂಶ, ಚೆಕ್ ಬೌನ್ಸ್ ಪ್ರಕರಣಗಳು, ಜನನ ಮರಣ, ಮೋಟಾರ್ ವಾಹನ ಅಪಘಾತ, ಎಂಎಂಆರ್ಡಿ



ಮತ್ತಿತರೇ ಪ್ರಕರಣಗಳಿಗೆ ಸಂಬಂಧಿಸಿದ ಸಿವಿಲ್ ಹಾಗು, ಕ್ರಿಮಿನಲ್ ಪ್ರಕರಣಗಳ ವಿಚಾರಣೆ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಕೂಡ್ಲಿಗಿ, ಹೊಸಪೇಟೆ, ಸಂಡೂರು, ಹರಪನಹಳ್ಳಿ, ಹಡಗಲಿ, ಸಿರುಗುಪ್ಪ ನ್ಯಾಯಾಲಯಗಳಲ್ಲಿ ಈ ಲೋಕ ಅದಾಲತ್ ನಡೆದಿತ್ತು.

# ಸಾಲಬಾಧೆ ತಾಳಲಾರದೆ ಒಂದೇ ಗ್ರಾಮದ ಇಬ್ಬರು ರೈತರ ಆತ್ಮಹತ್ಯೆ

**ಹುಬ್ಬಳ್ಳಿ,ಜು.13–** ಒಂದೇ ಗ್ರಾಮದಲ್ಲಿ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕುಂದಗೋಳ ತಾಲೂಕಿನ ಬರದ್ವಾಡ ಗ್ರಾಮದಲ್ಲಿ ನಡೆದಿದೆ. ರವಿರಾಜ್ ಜಾಡರ್(42) ಮತ್ತು ಬಸವನಗೌಡ ಪಾಟೀಲ್(56) ಮೃತ ದುರ್ದೈವಿಗಳು. ಕಳೆದ 24 ಗಂಟೆಗಳಲ್ಲಿ ಇಬ್ಬರು ರೈತರು ನೇಣಿಗೆ ಶರಣಾಗಿದ್ದು ಭಾರಿ ಆತಂಕ ಮೂಡಿಸಿದೆ.

ನಾಲ್ಕೈದು ವರ್ಷಗಳಿಂದ ಅತಿವೃಷ್ಟಿ, ಅನಾವೃಷ್ಟಿ ಹೊಡೆತಕ್ಕೆ ಕಂಗಾಲಾಗಿದ್ದ ರೈತರು,ಕೃಷಿಗಾಗಿ ಬ್ಯಾಂಕ್ ಮತ್ತು ಖಾಸಗಿಯಾಗಿ ಸಾಲ ಮಾಡಿದ್ದರು ಎಂದು ತಿಳಿದುಬಂದಿದೆ. ಕಳೆದ ರಾತ್ರಿ ಮನೆಯಲ್ಲಿಯೇ ನೇಣು ಬಿಗಿದುಕೊಂಡು ರೈತರ ಆತಹ ತ್ಯೆಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕುಂ ದಗೋಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ಮುಂದುವರೆದಿದೆ.



ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111, 9743496111

# ಪರಿಷತ್ ನೇಮಕಾತಿಗೆ ಡಿಕೆಶಿ ಅಡ್ಡಗಾಲು

**ಬೆಂಗಳೂರು,ಜು.13–** ವಿಧಾನ ಪರಿಷತ್ತಿನ ನಾಲ್ಕು ಸ್ಥಾನಗಳ ನೇಮಕಾತಿಗೆ ಸಂಬಂಧಪಟ್ಟಂತೆ ಡಿ.ಕೆ. ಶಿವಕುಮಾರ್ ಅಡ್ಡಲಾಗಿದ್ದು, ಇದೇ 16ರಂದು ನಡೆಯಲಿರುವ ಸಭೆಯಲ್ಲಿ ಸಂಧಾನ ಮಾತುಕತೆಗಳಾಗುವ ಸಾಧ್ಯತೆಯಿದೆ.

ವಿಧಾನ ಪರಿಷತ್ತಿನ ಸದಸ್ಯ ರನ್ನಾಗಿ ನೇಮಿಸಲು ಕೆಪಿಸಿಸಿಯ ಮಾಧ್ಯಮ ಘಟಕದ ಅಧ್ಯಕ್ಷ ರಮೇಶ್ ಬಾಬು, ದಲಿತ ಸಂಘರ್ಷ ಸಮಿತಿಯ ಮುಖಂಡ ಡಿ.ಜಿ. ಸಾಗರ್, ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ಅನಿವಾಸಿ ಭಾರತೀಯರ ಘಟಕದ ಉಪಾಧ್ಯಕ್ಷೆ ಆರತಿ ಕೃಷ್ಣ ಅವರ ಹೆಸರುಗಳು ಕೇಳಿ ಬಂದಿವೆ. ಇನ್ನೇನು ರಾಜ್ಯಭವನಕ್ಕೆ ಪಟ್ಟಿ ರವಾನೆಯಾಗಬೇಕು ಎಂಬ ಹಂತದಲ್ಲಿ ತಡೆ ಹಿಡಿಯಲ್ಪಟ್ಟಿದೆ.ನೇಮಕಾತಿಯಲ್ಲಿ ತಾವು ಸೂಚಿಸಿದವರಿಗೆ ಅವಕಾಶ ಸಿಕ್ಕಿಲ್ಲ ಎಂಬ ಕಾರಣಕ್ಕೆ ಡಿ.ಕೆ. ಶಿವಕುಮಾರ್ ತಗಾದೆ ತೆಗೆದಿದ್ದು, ಇಡೀ ಪಟ್ಟಿಯನ್ನು ತಡೆ ಹಿಡಿಯುವಂತೆ ಮಾಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಾಮಾಣಿಕ ನಡೆವಳಿಕೆ ಭಾರೀ ಪ್ರಮಾಣದ ಬೆಲೆ ತೆರುವಂತೆ ಮಾಡಿದೆ.

ಸಂಭವನೀಯ ನಾಲ್ವರ ಹೆಸರುಗಳ ಪಟ್ಟಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸುರ್ಜೇವಾಲ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕ್ರಮವಾಗಿ ಸಹಿ ಹಾಕಿದ್ದರು. ಪಟ್ಟಿ ಇನ್ನೇನು ರಾಜ್ಯಭವನಕ್ಕೆ ರವಾನೆಯಾಗಬೇಕು ಎಂಬ ಹಂತದಲ್ಲಿ ಅದು ಸೋರಿಕೆಯಾಗಿತ್ತು. ವಿಷಯ ತಿಳಿದ ರಮೇಶ್‌ಬಾಬು, ಆರತಿಕೃಷ್ಣ ಮುಖ್ಯಮಂತ್ರಿ ಅವರಿಗೆ ಅಭಿನಂದನೆ ಸಲ್ಲಿಸಲು ಆಗಮಿಸಿದ್ದರು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆರತಿಕೃಷ್ಣ ಅವರನ್ನು ಕುರಿತು ನೀವು ಈಗಾಗಲೇ ಅನಿವಾಸಿ ಭಾರತೀಯರ ಘಟಕದಲ್ಲಿ ಕೆಲಸ ಮಾಡುತ್ತಿದ್ದೀರಾ. ವಿಧಾನ ಪರಿಷತ್ತಿನ ಒಂದು ವರ್ಷದ ಸದಸ್ಯತ್ವಕ್ಕೆ ನಿಮನ್ನು ನೇಮಕ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ತಮ ಅವಧಿ ಕೇವಲ ಒಂದು ವರ್ಷ ಎಂದು ತಿಳಿದ ಆರತಿಕೃಷ್ಣ ಬೇಸರಗೊಂಡಿದ್ದಾರೆ. ಹೈಕಮಾಂಡ್ ಮಟ್ಟದಲ್ಲಿ ಪ್ರಭಾವಿಯಾಗಿರುವ ಅವರು ತಕ್ಷಣವೇ ದೆಹಲಿಯ ನಾಯಕರನ್ನು ಸಂಪರ್ಕಿಸಿ ತಮ ಅಳಲು ಹೇಳಿಕೊಂಡಿದ್ದಾರೆ. ಹೀಗಾಗಿ ರಾಜ್ಯ ಭವನ ತಲುಪಬೇಕಾಗಿದ್ದ ಪಟ್ಟಿ ತಡೆ ಹಿಡಿಯಲ್ಪಟ್ಟಿದೆ.ಈ ಗ್ಯಾಪ್‌ನಲ್ಲಿ ನಾನಾ ರೀತಿಯ ಅಸಮಾಧಾನಗಳು, ಚರ್ಚೆಗಳು ತಲೆ ಎತ್ತಿವೆ. ಡಿ.ಕೆ. ಶಿವಕುಮಾರ್ ಅವರು ಬಿ.ಎಲ್. ಶಂಕರ್ ಮತ್ತು ವಿನಯ್ ಕಾರ್ತಿಕ್ ಅವರ ಹೆರುಗಳನ್ನು ವಿಧಾನ ಪರಿಷತ್ತಿಗೆ ಶಿಫಾರಸು ಮಾಡಲು ಸೂಚಿಸಿದರು.ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ




ಕಡೆಯಿಂದ ದಿನೇಶ್ ಅಮೀನ್‌ಮಟ್ಟು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರ ಕಡೆಯಿಂದ ಡಿ.ಜಿ. ಸಾಗರ್ ಅವರ ಹೆಸರುಗಳು ಅಖೈರುಗೊಂಡಿದ್ದವು.

ಡಿಕೆ ಶಿವಕುಮಾರ್ ಶಿಫಾರಸು ಮಾಡಿದ್ದ ಹೆಸರುಗಳ ಬದಲಾಗಿ ಹೈಕಮಾಂಡ್‌ನಿಂದ ಆರತಿ ಕೃಷ್ಣ ಅವರ ಹೆಸರು ಸೇರ್ಪಡೆಯಾಗಿತ್ತು. ನಾಲ್ಕನೇ ಸ್ಥಾನಕ್ಕೆ ಪ್ರತಿಯೊಬ್ಬ ನಾಯಕರು ಮೂರರಿಂದ ನಾಲ್ಕು ಮಂದಿ ಹೆಸರುಗಳನ್ನು ಸಲಹೆ ಮಾಡಿದ್ದರು.ಅವರಲ್ಲಿ ರಮೇಶ್‌ಬಾಬು ಹೆಸರಿಗೆ ಸಿದ್ದರಾಮಯ್ಯ ಮತ್ತು ಮಲ್ಲಿಕಾರ್ಜುನ್ ಖರ್ಗೆ ಎರಡೂ ಕಡೆಯಿಂದಲೂ ಶಿಫಾರಸ್ಸಾಗಿತ್ತು. ಹೀಗಾಗಿ ನಾಲ್ಕನೇ ಸ್ಥಾನಕ್ಕೆ ರಮೇಶ್‌ಬಾಬು ಅವರ ಹೆಸರು ಸರ್ವಾನುಮತದಿಂದ ಆಯ್ಕೆಯಾಗಿತ್ತು. ಇದಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಅವರ ಒತ್ತಾಸೆಯೂ ಇತ್ತು.

ಆರತಿ ಕೃಷ್ಣ ಅವರ ತಕರಾರಿನಿಂದಾಗಿ ಪಟ್ಟಿ ರಾಜ್ಯಭವನ ತಲುಪುವುದು ವಿಳಂಬವಾಗುತ್ತಿದ್ದಂತೆ ಡಿ.ಕೆ. ಶಿವಕುಮಾರ್ ಅಲರ್ಟ್ ಆಗಿದ್ದಾರೆ.ಪಕ್ಷದ ನಿರ್ಧಾರ ಎಂಬ ಕಾರಣಕ್ಕಾಗಿ ತಾವು ಸಲಹೆ ಮಾಡಿದವರ ಹೆಸರುಗಳು ಪಟ್ಟಿಯಲ್ಲಿ ಇಲ್ಲದೇ ಇದ್ದರೂ, ಮರು ಮಾತನಾಡದೇ ಸಹಿ ಹಾಕಿದ ಡಿ.ಕೆ. ಶಿವಕುಮಾರ್ ತಮ ಬೆಂಬಲಿಗರಿಗೆ ಅನ್ಯಾಯವಾಗುತ್ತಿರುವುದನ್ನು ಖಂಡಿಸಲಾರಂಭಿಸಿದ್ದಾರೆ.ಈ ನಡುವೆ ರಮೇಶ್‌ಬಾಬು ಜೆಡಿಎಸ್ ನಿಂದ ಬಂದು ಅಲ್ಪಾವಧಿಯಾಗಿದೆ, ಪರಿಷತ್ತಿನ ಸದಸ್ಯತ್ವ ಸ್ಥಾನ ನೀಡುವ ಅಗತ್ಯವೇನು? ನಾವು ಹಲವಾರು ವರ್ಷಗಳಿಂದ ಪಕ್ಷ ನಿಷ್ಠರಾಗಿ ಕೆಲಸ ಮಾಡುತ್ತಿದ್ದೇವೆ. ನಮನ್ನು ಕಡೆಗಣಿಸಲಾಗುತ್ತಿದೆ ಎಂದು ಬಹಳಷ್ಟು ಮಂದಿ ನಿಷ್ಠಾವಂತರು ಅದರಲ್ಲೂ ಸಾಮಾಜಿಕ ಜಾಲತಾಣ ಮಾಧ್ಯಮ ಘಟಕದಲ್ಲಿ ಕೆಲಸ ಮಾಡಿದವರು ತಿರುಗಿ ಬಿದ್ದಿದ್ದಾರೆ.ಇದನ್ನು ತಮ ಅನುಕೂಲಕ್ಕೆ ಬಳಸಿಕೊಂಡ ಡಿ.ಕೆ. ಶಿವಕುಮಾರ್ ಒಟ್ಟಾರೆ ಪಟ್ಟಿಗೆ ತಡೆಯಾಗುವಂತೆ ಮಾಡಿದ್ದಾರೆ. ಹೀಗಾಗಿ ಮೂರು ತಿಂಗಳಾದರೂ ವಿಧಾನಪರಿಷತ್ತಿನ ಆಯ್ಕೆ ಇತ್ಯರ್ಥವಾಗದೆ ಗಜ ಪ್ರಸವದಂತಾಗಿದೆ.

# ಖ್ಯಾತ ಬಹುಭಾಷಾ ನಟ ಕೋಟ ಶ್ರೀನಿವಾಸ ರಾವ್ ಇನ್ನಿಲ್ಲ

**ಬೆಂಗಳೂರು,ಜು.13–**ದಕ್ಷಿಣ ಭಾರತದ ಖ್ಯಾತ ನಟ ಕೋಟ ಶ್ರೀನಿವಾಸ ರಾವ್ (83) ಅವರು ಇಂದು ನಿಧನರಾಗಿದಾರೆ. ಕಳೆದ ಕೆಲವು ದಿನಗಳಿಂದ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಹೈದರಾಬಾದ್‌ನಲ್ಲಿವ ಅವರ ನಿವಾಸದಲ್ಲಿ ಮುಂಜಾನೆ ವಿಧಿವಶರಾಗಿದ್ದಾರೆ.80 ವರ್ಷ ದಾಟಿದ ಮೇಲೆ ವೃದ್ಧಾಪ್ಯಸಮಸ್ಯೆ ಶುರುವಾಗಿದ್ದು ಸಿನಿಮಾ ನಟನೆ ಕಡಿಮೆಯಾಗಿತ್ತು ಅವರ ಕೊನೆಯ ಚಿತ್ರ 2023ರಲ್ಲಿ ಬಿಡುಗಡೆಯಾದ ಸುವರ್ಣ ಸುಂದರಿ ಸಾಕಷ್ಟು ಮೆಚ್ಚುಗೆ ಪಡೆದಿತ್ತು.

ಶ್ರೀನಿವಾಸ ರಾವ್ ಅವರು 1942ರ ಜುಲೈ 10ರಂದು ಕೃಷ್ಣ ಜಿಲ್ಲೆಯ ಕಂಕಿಪಡುವಿನಲ್ಲಿ ಜನಿಸಿದರು. ಅವರ ತಂದೆ ಡಾ. ಸೀತಾರಾಮಾಂಜನೇಯುಲು. ಬಾಲ್ಯದಲ್ಲಿ ತಂದೆಯಂತೆ ವೈದ್ಯನಾಗಬೇಕೆಂದು ಬಯಸಿದ್ದರೂ, ಶಾಲಾ ದಿನಗಳಲ್ಲಿ ನಾಟಕಗಳಲ್ಲಿ ಕಾಣಿಸಿಕೊಂಡ ನಂತರ ನಟನೆಯಲ್ಲಿ ಆಸಕ್ತಿ ಬೆಳೆಸಿಕೊಂಡು ನಟನೆಯನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡರು.

1978ರಲ್ಲಿ ಪ್ರಣಾಮ್ ಖರೀದು ಚಿತ್ರದ ಮೂಲಕ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು.ಅನೇಕ ಬಗೆಯ ಪಾತ್ರಗಳನ್ನು



ನಿರ್ವಹಿಸಿ ಸೈ ಎನಿಸಿಕೊಂಡಿದ್ದರು.ತೆಲುಗು ಮಾತ್ರವಲ್ಲದೇ ತಮಿಳು, ಹಿಂದಿ, ಕನ್ನಡ ಮತ್ತು ಮಲಯಾಳಂ ಸಿನಿಮಾಗಳಲ್ಲಿ ಕೂಡ ಕೋಟ ಶ್ರೀನಿವಾಸ ರಾವ್ ಅವರು ನಟಿಸಿದ್ದರು.

ಕಳನಾಯಕನ ಪಾತ್ರ, ಹಾಸ್ಯ ಸೇರಿದಂತೆ ಹಲವು ಬಗೆಯಲ್ಲಿ ಅವರು ಜನರನ್ನು ರಂಜಿಸಿದ್ದರು. ಪದವಿ ಶಿಕ್ಷಣ ಪಡೆದ ನಂತರ ಅವರಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಕೆಲಸ ಸಿಕ್ಕಿತು ಆದರೆ ಅಲ್ಲಿ ತಮ ಸೇವೆ ಕೆಲವು ತಿಂಗಳು ಮಾತ್ರ.

ಆಗ ಕೋಟ ಶ್ರೀನಿವಾಸ ರಾವ್ ಅವರು ರುಕಿಣಿ ಅವರನ್ನು ವಿವಾಹವಾದರು ಅವರಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗನಿದ್ದಾರೆ. ಕೋಟ ಶ್ರೀನಿವಾಸ್ ಅವರ ಮಗ ಕೋಟ ವೆಂಕಟ ಆಂಜನೇಯ ಪ್ರಸಾದ್ ಅವರು ಚಿತ್ರರಂಗಕ್ಕೆ ಪ್ರವೇಶಿಸುವ ಹಂತದಲ್ಲಿದ್ದಾಗ ಅಪಘಾತದಲ್ಲಿ ಮೃತಪಟ್ಟಿದ್ದರು. ಮಗನ ಅಕಾಲಿಕ ಮರಣದಿಂದ ಅವರು ತೀವ್ರ ಆಘಾತಕ್ಕೊಳಗಾಗಿದ್ದರು ಅದರಿಂದ ಹೊರಬಂದು ಹಲಾವರು ಚಿತ್ತರಗಳಲ್ಲಿ ನಟಿಸಿದ್ದರು. ಕೋಟ ಶ್ರೀನಿವಾಸ್ ರಾವ್ ಅವರು ಕೇವಲ ನಟರಲ್ಲ. ರಾಜಕೀಯಕ್ಕೂ ಪ್ರವೇಶಿಸಿ ಯಶಸ್ಸುಕಂಡಿದ್ದರು. 1999ರಿಂದ 2004 ರವರೆಗೆ ವಿಜಯವಾಡ ಪೂರ್ವ ಕ್ಷೇತ್ರದ ಶಾಸಕರಾಗಿ ಸೇವೆ ಸಲ್ಲಿಸಿದ್ದರು. ಕನ್ನಡದ ಲೇಡಿ ಕಮಿಷನರ್, ರಕ್ತ ಕಣ್ಣಿರು, ಲವ್, ನಮ ಬಸವ, ನಮಣ್ಣ, ಶ್ರಿಮತಿ, ಕಬ್ಜಾ ಮುಂತಾದ ಸಿನಿಮಾಗಳಲ್ಲಿ ಅವರು ನಟಿಸಿದ್ದರು.ಈವರೆಗೆ ಸುಮಾರು 750 ಕ್ಕೂ ಹೆಚ್ಚಿ ಸಿನಿಮಾದಲ್ಲಿ ನಟಿಸಿದ ಹಿರಿಮೆ ಹೊಂದಿದ್ದರು.ಕೋಟ ಶ್ರೀನಿವಾಸ ರಾವ್ ಅವರ ನಿಧನಕ್ಕೆ ತೆಲಂಗಾಣ ಮುಖ್ಯಮಂತ್ರಿ ಎ ರೇವಂತ್ ರೆಡ್ಡಿ ,ಚಿತ್ರರಂಗ,ರಾಜಕೀಯ ಮುಖಂಡರು ಸಂತಾಪ ಸಂತಾಪ ಸೂಚಿಸಿದ್ದಾರೆ.

# ಸಿಯುಕೆ: ಕೃತಕ ಬುದ್ಧಿಮತ್ತೆ ಕುರಿತು ಅಭಿವೃದ್ಧಿ ಕಾರ್ಯಗಾರ

**ಕಲಬುರಗಿ,ಜು.13–** ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ಶಿಕ್ಷಕರಿಗೆ ಜನರೇಟಿವ್ ಎಐ (ಕೃತಕ ಬುದ್ಧಿಮತ್ತೆ) ಪರಿಕರಗಳು ಹೆಚ್ಚು ಉಪಯುಕ್ತವೆಂದು ಸಾಬೀತಾಗುತ್ತಿವೆ. ಎಐ ಈಗ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಕಾಡ್ಗಿಚ್ಚಿನಂತೆ ಹರಡುತ್ತಿದೆ ಎಂದು ಸಿಯುಕೆಯ ಕುಲಸಚಿವ ಪ್ರೊ. ಆರ್. ಆರ್. ಬಿರಾದಾರ್ ಹೇಳಿದರು.

ಅವರು ವಿಶ್ವೇಶ್ವರಯ್ಯ ಪಿಎಡಿ ಯೋಜನೆಯಡಿಯಲ್ಲಿ ಬೆಂಗಳೂರಿನ ಕ್ಯಾಪಬಲ್ ಇಂಡಿಯಾ ಮತ್ತು ಕಂಪ್ಯೂಟರ್ ಸೊಸೈಟಿ ಆಫ್ ಇಂಡಿಯಾ ಸಹಯೋಗದೊಂದಿಗೆ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯವು ಜನರೇಟಿವ್ ಎಐ (ಕೃತಕ ಬುದ್ಧಿಮತ್ತೆ) ಕುರಿತು ಒಂದು ದಿನದ ಅಧ್ಯಾಪಕರ ಅಭಿವೃದ್ಧಿ ಕಾರ್ಯಗಾರವನ್ನು ಉದ್ದೇಶಿಸಿ ಮಾತನಾಡಿದರು. ಅವರು ಮುಂದುವರೆದು ಮಾತನಾಡಿ ಕೃಷಿಯಲ್ಲಿ, ಎಐ–ಮಾರ್ಗದರ್ಶಿ ಡ್ರೋನ್

ಗಳ ಮೂಲಕ ಬೆಳೆಗಳ ಬೆಳವಣಿಗೆ ಮತ್ತು ಆರೋಗ್ಯವನ್ನು ದೂರದಿಂದಲೇ ಮೇಲ್ವಿಚಾರಣೆ ಮಾಡಬಹುದು. ಆರೋಗ್ಯ ವಲಯದಲ್ಲಿ, ಇಂಟರ್ನೆಟ್ ಆಫ್ ಥಿಂಗ್ಸ್ (ಐಓಟಿ) ಮತ್ತು ಎಐ–ಸಕ್ರಿಯಗೊಳಿಸಿದ ಸಾಫ್ಟವೇರ್ ಸಹಾಯದಿಂದ, ರೋಗಿಗಳ ಪ್ರಗತಿಯನ್ನು ನೈಜ ಸಮಯದಲ್ಲಿ ಮೇಲ್ವಿಚಾರಣೆ ಮಾಡಬಹುದು. ಔಷಧ ಅಭಿವೃದ್ಧಿ ಮತ್ತು ಚಿಕಿತ್ಸಾ ಯೋಜನೆಯಲ್ಲಿ ಎಐ ಅನ್ನು ಹೆಚ್ಚಾಗಿ ಬಳಸಲಾಗುತ್ತಿದೆ. ಅದೇ ರೀತಿ, ಕೈಗಾರಿಕಾ ಮತ್ತು ಉತ್ಪಾದನಾ ವಲಯಗಳಲ್ಲಿ ವಿಶೇಷವಾಗಿ ಆಟೋಮೊಬೈಲ್ ಉದ್ಯಮದಲ್ಲಿ ಎಐ ಕ್ರಾಂತಿಕಾರಕವಾಗಿದೆ. ಇಂದು, ನಮ್ಮಲ್ಲಿ ಚಾಲಕರಹಿತ ಕಾರುಗಳಿವೆ. ಎಐ–ಆಧಾರಿತ ತಂತ್ರಜ್ಞಾನವು ಶಿಕ್ಷಣ ಸೇರಿದಂತೆ



ಬಹುತೇಕ ಪ್ರತಿಯೊಂದು ಕ್ಷೇತ್ರಕ್ಕೂ ವೇಗವಾಗಿ ವಿಸ್ತರಿಸುತ್ತಿದೆ. ವಿಶೇಷವಾಗಿ ಬೋಧನೆ ಮತ್ತು ಸಂಶೋಧನೆಯಲ್ಲಿ, ಎಐ ಶೈಕ್ಷಣಿಕ ಭೂದೃಶ್ಯವನ್ನು ಪರಿವರ್ತಿಸುತ್ತಿದೆ ಮತ್ತು ಶೈಕ್ಷಣಿಕ ಪ್ರಯಾಣಗಳನ್ನು ಮರುರೂಪಿಸುತ್ತಿದೆ" ಎಂದು ಅವರು ಹೇಳಿದರು.

ಕಾರ್ಯಕ್ರಮದ ಸಂಚಾಲಕ ಪ್ರೊ. ಆರ್. ಎಸ್. ಹೆಗಡಿ ಸ್ವಾಗತ ಭಾಷಣ ಮಾಡಿದರು. ಸಂಪನ್ಮೂಲ ವ್ಯಕ್ತಿಗಳಾದ ಕ್ಯಾಪಬಲ್ ಇಂಡಿಯಾದ ಸಹ–ಸಂಸ್ಥಾಪಕ ಉಮಂಗ್ ಸುರಾನ ಮತ್ತು ಮೊಹಮ್ಮದ್ ಅಮೀರ್ ಎಐ ಕುರಿತು ಗೋಷ್ಠಿಗಳನ್ನು ನಡೆಸಿದರು. ಏರ್‌ಬಸ್ ಇಂಡಿಯಾದ ಜನರಲ್ ಎಐ ಕಾರ್ಪೊರೇಟ್ ತರಬೇತುದಾರ ಜೆಮಿನಿ, ನೋಟ್‌ಬುಕ್ ಎಲ್ ಎಲೆ ಎಮ್, ಗಾಮಾ ಅಪ್ಲಿಕೇಶನ್, ಲಬಬಲ್ ಅಪ್ಲಿಕೇಶನ್, ಎನ್8ಎನ್ ಪರಿಕರಗಳಂತಹ ವಿವಿಧ ಜನರೇಟಿವ್ ಎಐ ಪರಿಕರಗಳ ಕುರಿತು ತರಬೇತಿ ನೀಡಿದರು.

ಕಲಬುರಗಿ, ರಾಯಚೂರು, ವಿಜಯಪುರ, ಬಾಗಲಕೋಟೆ ಮತ್ತು ಸೊಲಾಪುರದಿಂದ ಸುಮಾರು 70 ಕ್ಕೂ ಹೆಚ್ಚು ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮದ ಸಹ–ಸಂಚಾಲಕ ಡಾ. ರಾಕೇಶ್ ಕುಮಾರ್ ಗೋದಿ ವಂದಿಸಿದರು.

# ಬಿಹಾರ ಚುನಾವಣೆ ನಂತರ ರಾಜ್ಯ ರಾಜಕೀಯದಲ್ಲಿ ಬದಲಾವಣೆ..!

**ಬೆಂಗಳೂರು,ಜು.13–** ಬಿಹಾರ ವಿಧಾನಸಭೆ ಚುನಾವಣೆ ಫಲಿತಾಂಶ ಕಾಂಗ್ರೆಸ್ ಹೈಕಮಾಂಡ್‌ನ ಬಲಾ–ಬಲವನ್ನು ಪರೀಕ್ಷೆ ಒಳಪಡಿಸಲಿದ್ದು, ಸಹಜವಾಗಿಯೇ ರಾಜ್ಯ ರಾಜಕಾರಣದ ಮೇಲೆ ಪರಿಣಾಮ ಬೀರುವ ನಿರೀಕ್ಷೆಗಳಿವೆ. ಈ ಹಿನ್ನೆಲೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸುರ್ಜೇವಾಲ ನಡೆಸುತ್ತಿರುವ ಸರಣಿ ಸಭೆಗಳು ತೀವ್ರ ಕುತೂಹಲ ಕೆರಳಿಸಿವೆ. ಸಚಿವ ಸಂಪುಟ ಪುನರ್ ರಚನೆ, ನಿಗಮ ಮಂಡಳಿಗಳ ನೇಮಕಾತಿ ಸೇರಿದಂತೆ ಹಲವಾರು ವಿಚಾರಗಳಲ್ಲಿ ಈವರೆಗೂ ಹೈಕಮಾಂಡ್‌ನ ಪ್ರಭಾವ ಎದ್ದುಕಾಣುತ್ತಿದೆ.

ಒಂದು ವೇಳೆ ಬಿಹಾರದ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದಾದರೆ ಸಿದ್ದರಾಮಯ್ಯ ಅವರು ಹೆಚ್ಚು ಪ್ರಭಾವಿಯಾಗಲಿದ್ದು, ಡಿ.ಕೆ. ಶಿವಕುಮಾರ್ ಬಣಕ್ಕೆ ಮತ್ತಷ್ಟು ಹಿನ್ನಡೆಯಾಗುವ ನಿರೀಕ್ಷೆಯಿದೆ.ರಾಷ್ಟ್ರ ರಾಜಕಾರಣದ ನಾಯಕತ್ವದಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿಯೇ ಹೈಕಮಾಂಡ್ ಎಂಬ ರೀತಿ ಬಿಂಬಿತವಾಗಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೆಪ ಮಾತ್ರಕ್ಕೆ ಅಧ್ಯಕ್ಷರು ಎಂಬಂತೆ ರಾಜ್ಯದಲ್ಲಿ ಕೆಲ ನಾಯಕರು ವರ್ತಿಸುತ್ತಿದ್ದಾರೆ.ನಾಯಕತ್ವದ ಕುರಿತು ಚರ್ಚೆಯಲ್ಲಿ ಯಾರೂ ಹಸ್ತಕ್ಷೆ?ಪ ಮಾಡಬಾರದು ಎಂದು ಮಲ್ಲಿಕಾರ್ಜುನ್ ಖರ್ಗೆಯವರೇ ಹೇಳಿಕೆ ನೀಡಿದ ಬಳಿಕವೂ, ಪದೇಪದೇ ಬೆಂಕಿ ಬಿರುಗಾಳಿಯಂಥ ಮಾತುಗಳನ್ನಾಡುತ್ತಾ ಸರ್ಕಾರ ಮತ್ತು ಪಕ್ಷದಲ್ಲಿ ಕೆಲವರು ಗೊಂದಲ ಸೃಷ್ಟಿಸುತ್ತಲೇ ಇದ್ದಾರೆ. ಅಂಥವರ ವಿರುದ್ಧ ಕ್ರಮಕೈಗೊಳ್ಳಲು ಸಾಧ್ಯವಾಗದೆ ಕಾಂಗ್ರೆಸ್‌ನ ಹಿರಿಯ ನಾಯಕರು ಕೈ–ಕೈ ಹಿಸುಕಿಕೊಳ್ಳುತ್ತಿದ್ದಾರೆ.

ಎಐಸಿಸಿಯಲ್ಲಿ ರಾಹುಲ್‌ಗಾಂಧಿ ಪ್ರಭಾವಿ ನಾಯಕರಾಗಿದ್ದು, ಅವರ ಬೆಂಬಲಿತ ನಾಯಕತ್ವಕ್ಕೆ ಹೆಚ್ಚಿನ ಬೆಂಬಲ ದೊರೆಯುತ್ತಿದೆ. ಹೀಗಾಗಿ ರಾಜ್ಯದಲ್ಲಿ ಗೊಂದಲ ಮೂಡಿಸುತ್ತಿದ್ದರೂ ಸಿದ್ದರಾಮಯ್ಯ ಅವರ ಬೆಂಬಲಿಗರಿಗೆ ಯಾವುದೇ ಕ್ರಮಗಳಾಗುತ್ತಿಲ್ಲ. ಸಂಪುಟದಲ್ಲಿ ಹಲವಾರು ಸಚಿವರು ಸೆಪ್ಟಂಬರ್ ಕ್ರಾಂತಿ ಸೇರಿದಂತೆ ಅನೇಕ ರೀತಿಯ ಹೇಳಿಕೆಗಳನ್ನು ನೀಡಿದ್ದಾರೆ.ಅವರ ವಿರುದ್ಧ ಸಣ್ಣ ಮಟ್ಟದ ಗದರಿಕೆಗಳೂ ಕೇಳಿಬಂದಿಲ್ಲ. ಅದೇ ಡಿ.ಕೆ. ಶಿವಕುಮಾರ್ ಪರವಾಗಿ ಮಾತನಾಡಿದವರಿ ನೋಟೀಸ್ ನೀಡಲಾಗಿದೆ. ಈ ರೀತಿಯ ತಾರತಮ್ಯಗಳು ಪಕ್ಷದಲ್ಲಿ ನಾನಾ ರೀತಿಯ ವ್ಯಾಖ್ಯಾನಗಳಿಗೆ ಕಾರಣವಾಗಿವೆ.ಹೈಕಮಾಂಡ್‌ನಲ್ಲಿ ಪ್ರಾಬಲ್ಯ ಹೆಚ್ಚಿದೆ ಎಂಬ ಕಾರಣಕ್ಕೆ ಸಿದ್ದರಾಮಯ್ಯ ಅವರ ಬೆಂಬಲಿಗರು ಮನಸ್ಸಿಗೆ



ಬಂದಂತೆ ಎಂಬ ಟೀಕೆಗಳಿವೆ.ಬಿಹಾರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಥವಾ ಅದರ ಮಿತ್ರಕೂಟ ಸರ್ಕಾರ ರಚಿಸಿದ್ದಾದರೆ ರಾಹುಲ್‌ಗಾಂಧಿ ಅವರ ನಾಯಕತ್ವಕ್ಕೆ ರಾಷ್ಟ್ರ ಮಟ್ಟದಲ್ಲಿ ಮಾನ್ಯತೆ ಉಳಿಯುತ್ತದೆ. ಈ ವರೆಗೂ ನಡೆದಿರುವ ಲೋಕಸಭೆ ಹಾಗೂ ವಿವಿಧ ರಾಜ್ಯದ ವಿಧಾನಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ತೀವ್ರ ಹಿನ್ನಡೆ ಅನುಭವಿಸಿದೆ.

ರಾಹುಲ್ ಗಾಂಧಿಯವರನ್ನು ಸೋಲಿನ ನಾಯಕ ಎಂದು ಬಿಂಬಿಸಲಾಗಿದೆ. ಬಹುತೇಕ ಅವರ ಪ್ರಾಬಲ್ಯ ತಗ್ಗಿದ ಹೊತ್ತಿನಲ್ಲಿ 2023ರ ಲೋಕಸಭೆ ಚುನಾವಣೆ ವಿರೋಧ ಪಕ್ಷ ನಾಯಕನನ್ನು ಘೋಷಿಸುವಷ್ಟು ಸಾಮರ್ಥ್ಯಗಳಿಸಿಕೊಂಡಿದ್ದಾರೆ ಹೀಗಾಗಿ ರಾಹುಲ್ ಗಾಂಧಿ ಪುಟಿದೆದ್ದಿದ್ದರು. ಹೈಕಮಾಂಡ್‌ನಲ್ಲಿ ಮತ್ತೆ ಪ್ರಭಾವಿಯಾಗಿ ಮುಂದುವರೆದಿದ್ದಾರೆ.ಬಿಹಾರ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲದೆ ಇದ್ದರೆ ರಾಹುಲ್‌ಗಾಂಧಿ ಅವರ ನಾಯಕತ್ವಕ್ಕೆ ಹಿನ್ನಡೆಯಾಗಲಿದೆ. ಅನಂತರ ರಾಹುಲ್‌ಗಾಂಧಿ ಅವರನ್ನೆ ಹೈಕಮಾಂಡ್‌ನ ನಾಯಕತ್ವದಲ್ಲಿ ಮುಂಚೂಣಿಯಲ್ಲಿಡಬೇಕೆ ಅಥವಾ ಪ್ರಿಯಾಂಕ ಗಾಂಧಿ ಅವರನ್ನು ಮುನ್ನೆಲೆಗೆ ತರಬೇಕೆ ಎನ್ನುವ ಬಗ್ಗೆ ಚರ್ಚೆಗಳು ಶುರುವಾಗಲಿವೆ.ಈ ಹಿನ್ನೆಲೆಯಲ್ಲಿ ಪ್ರಿಯಾಂಕಗಾಂಧಿ ಭವಿಷ್ಯದ ಕಾಂಗ್ರೆಸ್ಸಿನ ಪ್ರಭಾವಿ ನಾಯಕಿಯಾಗುವ ಸಾಧ್ಯತೆಯಿದೆ.

ಇತ್ತಿಚೆಗೆ ದೆಹಲಿಗೆ ಭೇಟಿ ನೀಡಿದ ಡಿ.ಕೆ. ಶಿವಕುಮಾರ್ ಅವರು ರಾಹುಲ್‌ಗಾಂಧಿ ಅಥವಾ ಮಲ್ಲಿಕಾರ್ಜುನ್ ಖರ್ಗೆ ಅವರನ್ನು ಭೇಟಿಯಾಗದೇ ಪ್ರಿಯಾಂಕ ಗಾಂಧೀ ಅವರನ್ನು ಭೇಟಿಯಾಗಿದ್ದು, ಈ ಎಲ್ಲಾ ಚರ್ಚೆಗಳಿಗೆ ಪುಷ್ಟಿ ನೀಡಿದಂತಾಗದೆ. ಒಂದು ವೇಳೆ ನಿರೀಕ್ಷೆಯಂತೆ ಬಿಹಾರದ ಫಲಿತಾಂಶ ಕಾಂಗ್ರೆಸ್ ಪರವಾಗಿ ಬಂದರೆ ಸಿದ್ದರಾಮಯ್ಯ ಅವರ ಬಣಕ್ಕೆ ರಾಜ್ಯದಲ್ಲಿ ಹೆಚ್ಚಿನ ಬಲಬಂದಂತಾಗುತ್ತದೆ. ಬಿಹಾರದ ಚುನಾವಣೆ ಫಲಿತಾಂಶ ನಿರೀಕ್ಷೆ ಹುಸಿ ಮಾಡಿದರೆ ಡಿ.ಕೆ. ಶಿವಕುಮಾರ್ ಅವರ ಬಣದ ಕೈಮೇಲಾಗಲಿದೆ.

# ಪಾಲಿಕೆ ಮುಷ್ಕರನಿರತ ನೌಕರರಿಗೆ ಶಾಸಕರ ಭರವಸೆ

**ಕಲಬುರಗಿ.ಜು.13–** ಸೇವಾ ಸಂಬಂಧಿತ ವಿವಿಧ ವಿಷಯಗಳ ಕುರಿತು ಸರ್ಕಾರದಿಂದ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಕಳೆದ ಐದು ದಿನಗಳಿಂದ ಮುಷ್ಕರ ನಡೆಸುತ್ತಿದ್ದ ಮಹಾನಗರ ಪಾಲಿಕೆಯ 10 ನೌಕರರ ಗುಂಪಿಗೆ ಇಂದು ಹೆಚ್ಚಿನ ವಿಶ್ವಾಸ ದೊರೆತಿದೆ. ಕಲಬುರಗಿ ಉತ್ತರದ ಶಾಸಕಿ ಕನೀಜ್ ಫಾತಿಮಾ ಅವರ ಪರವಾಗಿ ಮಧ್ಯಪ್ರವೇಶಿಸಿದ ನಂತರ ಅವರ ಕಳವಳಗಳು ಅಂಗೀಕರಿಸಲ್ಪಟ್ಟವು.

ಶಾಸಕಿ ಕನೀಜ್ ಫಾತಿಮಾ ಅವರು ನೌಕರರ ಕುಂದುಕೊರತೆಗಳ ಕುರಿತು ನಗರಾಭಿವೃದ್ಧಿ ಸಚಿವರೊಂದಿಗೆ ವೈಯಕ್ತಿಕವಾಗಿ ಚರ್ಚೆಯಲ್ಲಿ ತೊಡಗಿದರು ಮತ್ತು ತಕ್ಷಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಸಭೆಯ ನಂತರ, ಸಚಿವರು ತಮ್ಮ ಬೇಡಿಕೆಗಳನ್ನು ಗಮನಿಸಿದ್ದಾರೆ ಮತ್ತು ಅವುಗಳನ್ನು ಆದಷ್ಟು ಬೇಗ ಪರಿಹರಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಎಂದು ಪ್ರತಿಭಟನಾ ನಿರತ ಕಾರ್ಮಿಕರಿಗೆ ಭರವಸೆ ನೀಡಿದರು.

ಶಾಸಕರ ಮಧ್ಯಸ್ಥಿಕೆಯಿಂದ ನೌಕರರು ತೃಪ್ತಿ ವ್ಯಕ್ತಪಡಿಸಿದ್ದಾರೆ ಮತ್ತು ನಗರಾಭಿವೃದ್ಧಿ ಸಚಿವಾಲಯದಿಂದ ಔಪಚಾರಿಕ ಪ್ರತಿಕ್ರಿಯೆ ಬಾಕಿ ಇದ್ದು, ಶೀಘ್ರದಲ್ಲೇ ಕೆಲಸಕ್ಕೆ ಮರಳುವ ನಿರೀಕ್ಷೆಯಿದೆ. ಸ್ಥಳೀಯ ನಿವಾಸಿಗಳು ಸಹ ಈ ಬೆಳವಣಿಗೆಗಳನ್ನು ಸ್ವಾಗತಿಸಿದ್ದಾರೆ ಮತ್ತು



ಈ ವಿಷಯವನ್ನು ರಾಜ್ಯ ಅಧಿಕಾರಿಗಳ ಗಮನಕ್ಕೆ ತರುವಲ್ಲಿ ಶಾಸಕಿ ಕನೀಜ್ ಫಾತಿಮಾ ಅವರ ಪೂರ್ವಭಾವಿ ಪ್ರಯತ್ನಗಳನ್ನು ಶ್ಲಾಘಿಸಿದ್ದಾರೆ.ಫರಾಜ್ ಉಲ್ ಇಸ್ಲಾಂ, ಸೈಯದ್ ಅಹ್ಮದ್, ಅಜ್ಮಲ್ ಗೋಲಾ, ಟಬ್ಬೋ ಖಾನ್, ಅಜೀಂ, ಶ್ರೀನಿಫರೋಶ್, ರವಿ ರಾಥೋಡ್ ಸೇರಿದಂತೆ ಹಲವರಿದ್ದರು

# ರಾಯಲ್ ಸರ್ಕಲ್ ಕಾಮಗಾರಿ ಡಾಂಬರೀಕರಣ ಆರಂಭಟ್ರಾಫಿಕ್ ಸಮಸ್ಯೆಗೆ ದೊರೆಯಲಿದೆಯಾ ಮುಕ್ತಿ

**ಬಳ್ಳಾರಿ, ಜು.13–** ನಗರದ ಜನ, ವಾಹನ ನಿಬಿಡವಾದ ಗಡಗಿ ಚೆನ್ನಪ್ಪ(ರಾಯಲ್ ) ಸರ್ಕಲ್ ನಲ್ಲಿ ನಡೆಯುತ್ತಿದ್ದ ಕಾಮಗಾರಿ ಮುಕ್ತಾಯದ ಹಂತಕ್ಕೆ ಬಂದಿದ್ದು ಇಂದು ಡಾಂಬರೀಕರಣ ಮಾಡುವ ಕೆಲಸ ಆರಂಭಗೊಂಡಿದ್ದು. ನಾಳೆ ಇಲ್ಲವೇ ನಾಡಿದ್ದು ಈ ವರೆಗಿನ ಇಲ್ಲಿನ ಟ್ರಾಫಿಕ್ ಸಮಸ್ಯೆಗೆ ಮುಕ್ತಿ ದೊರೆಯಲಿದೆ.

ಈ ಸರ್ಕಲ್ ಇಲ್ಲದೇ ಬಳ್ಳಾರಿಯ ಜನರ ಜೀವನ ಒಂದಿಷ್ಟು ಕಷ್ಟ. ಒಂದಲ್ಲ ಒಂದು ಕೆಲಸಕ್ಕೆ ಇದರ ಮೂಲಕವೇ ಹಾದು ಹೋಗಬೇಕಿದೆ. ಜೊತೆಗೆ ಬಸ್ ನಿಲ್ದಾಣ, ಸಿನಿಮಾ ಮಂದಿರ ಮೊದಲಾದ ವಾಣಿಜ್ಯ ಚಟುವಟಿಕೆಗಳಿಂದ ಕೂಡಿದೆ.ಇಂತಹ ಸರ್ಕಲ್ ಅಭಿವೃದ್ಧಿಯ ಕಾಮಗಾರಿ ಹಲವು ತಿಂಗಳು ಕೈಗೊಂಡು ಜನರ ವೇಗದ ಜೀವನಕ್ಕೆ ಕೊಕ್ಕೆ ಹಾಕಿದಂತೆ ಇತ್ತು. ಕಳೆದ ಒಂದು ತಿಂಗಳಿನಿಂದ ಸರ್ಕಲ್ ಸುತ್ತ ಕೈಗೊಂಡ ಕಾಮಗಾರಿಯಿಂದ ಅತ್ತ ಇತ್ತಲಿನ ರಸ್ತೆಗಳನ್ನು ಬಂದ್ ಮಾಡಿದ್ದು ವಾಹನಗಳ ಸವಾರರು ಸುತ್ತು ಬಳಸಿ ಹೋಗಲು ಇತರೇ ರಸ್ತೆಗಳಲ್ಲಿ ಯಮಯಾತನೆ ತಂದಿಟ್ಟಿತ್ತು.ಟ್ರಾಫಿಕ್ ಸಮಸ್ಯೆಯಿಂದ ಜನತೆ ಸುವರ್ಣ ಸುಂದರ ಬಳ್ಳಾರಿಗೂ ಹಿಡಿ ಶಾಪ ಹಾಕಿದರು. ಯಾವುದೇ ಮುನ್ಸೂಚನೆ ಇಲ್ಲದೆ ರಸ್ತೆಗಳನ್ನು ಬಂದ್ ಮಾಡುತ್ತಿದ್ದರ ಬಗ್ಗೆ ಬೇಸರಗೊಂಡಿದ್ದರು.ಇದರಿಂದ ಕೆಸಿ ರಸ್ತೆಯಲ್ಲಿನ ಟ್ರಾಫಿಕ್ ಸಮಸ್ಯೆ ಮಿತಿ ಮೀರಿತ್ತು. ಇದನ್ನು ನಿಯಂತ್ರಿಸಲು ಪೊಲೀಸರು ಹೈರಾಣಾಗಿದ್ದರು. ರಸ್ತೆಯೂ ಹಾಳಾಗಿ ಹೋಗಿತ್ತು.

ಇಂದು ರಾಯಲ್ ಸರ್ಕಲ್ ಸುತ್ತಮುತ್ತ ಡಾಂಬರೀಕರಣ ಮಾಡುವ ಕಾಮಗಾರಿ ಸಾಗಿದೆ ನಾಳೆಗೆ ಅನಂತಪುರಂ ರಸ್ತೆಯಿಂದ ಬರುವ ಹೋಗುವ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಬಹುದಾಗಿದೆ.ಇನ್ನು ಕಾಮಗಾರಿ ಮುಗಿದ ತಕ್ಷಣ ದುರ್ಗಮ್ಮನಗುಡಿ ರೈಲ್ವೇ ಅಂಡರ್ ಬ್ರಿಡ್ಜ್ ನಂತೆ ಸಣ್ಣ ಪುಟ್ಟ ಕಾಮಗಾರಿ ಇದೆಂದು ಗುತ್ತಿಗೆದಾರರು ಮತ್ತಷ್ಟು ದಿನ ಸರ್ಕಲ್ ನ್ನು ಬಂದ್ ಮಾಡುತ್ತಾರೋ. ಇಲ್ಲ ಜನರಿಗೆ ಅನುಕೂಲ ಮುಖ್ಯ ಎಂದು ತಕ್ಷಣ ವಾಹನಗಳ ಓಡಾಟಕ್ಕೆ ಅನುಕೂಲ ಮಾಡುತ್ತಾರೋ ಕಾದು ನೋಡಬೇಕಿದೆ.



# ನವಲಿ ಜಲಾಶಯದ ಯೋಜನೆಗೆ ನೂರು ಹೆಜ್ಜೆ

ಭತ್ತದ ನಾಡು ಇಂದು ಬತ್ತಿ ಹೋಗುತ್ತಿದೆ, ದೇಶಕ್ಕೆ ಅನ್ನ ನೀಡುತ್ತಿದ್ದ ಪ್ರದೇಶದಲ್ಲಿ ಇಂದು ಆಹಾಕಾರ ಉಂಟಾಗುತ್ತಿದೆ ಇದಕ್ಕೆ ಪ್ರಮುಖ ಕಾರಣ ನಮ್ಮ ಭಾಗದ ನೀರಾವರಿ ಯೋಜನೆಗಳನ್ನು ಜಾರಿಗೆ ತರಲು ಅಧಿಕಾರಕ್ಕೆ ಬಂದ ಎಲ್ಲಾ ಪಕ್ಷಗಳು ಹಾಗೂ ರಾಜಕಾರಣಿಗಳು ನಿರ್ಲಕ್ಷತನ ಮಾಡಿದ್ದೂ ಇಂದು ಕುಡಿಯಲು ನೀರು ಕೂಡ ಸರಿಯಾಗಿ ಸಿಗುತ್ತಿಲ್ಲ ಹೀಗೆ ಮುಂದುವರೆದರೆ ಈ ಭಾಗದಲ್ಲಿ ನೀರಿಗಾಗಿ ನೀರಿಗಾಗಿ ಆಹಾಕಾರ ತೀವ್ರಗೊಳ್ಳಲಿದೆ,

ಇಂತಹ ಪರಿಣಾಮಕಾರಿಯಾಗಿರುವಂತ ಸಮಸ್ಯೆ ಒಂದು ಕಡೆಯಾದರೆ, ಆರೋಗ್ಯ, ಶೈಕ್ಷಣಿಕ ದೃಷ್ಟಿಯಿಂದ ನಮ್ಮ ಜಿಲ್ಲೆಯಲ್ಲಿ ಏಮ್ಸ್ ನಿರ್ಮಾಣವಾಗಬೇಕೆಂದು ಕನಸು ಕಂಡಿರುವ ಮಾಜಿ ಸಚಿವರಾದ ಕೆ. ಶಿವನಗೌಡ ನಾಯಕ ಅವರು ಒಂದು ದಿಟ್ಟ ಹೆಜ್ಜೆ ಇಟ್ಟಿದ್ದಾರೆ. ರಾಯಚೂರು ಜಿಲ್ಲೆಯ ಮಾನ್ವಿ, ಸಿಂಧನೂರು, ದೇವದುರ್ಗ,ಮಸ್ಕಿ, ಸಿರಿವಾರ,ರಾಯಚೂರು ಗ್ರಾಮೀಣ,ಸೇರಿದಂತೆ ಕೊಪ್ಪಳ ಜಿಲ್ಲೆಯ ಗಂಗಾವತಿ ಕಾರಟಗಿ ಕನಕಗಿರಿ ತಾಲೂಕುಗಳಿಗೆ ನವಲಿ ಜಲಾಶಯ ಯೋಜನೆಯಿಂದ ಶಾಶ್ವತ ಪರಿಹಾರ ಸಿಗುತ್ತದೆ.


ತಿಂಥಣಿ ಬ್ರಿಡ್ಜ್ ನಿರ್ಮಾಣದಿಂದ ದೇವದುರ್ಗ, ಸಿರಿವಾರ, ಅರಕೆರಾ,ರಾಯಚೂರು ನಗರ, ರಾಯಚೂರು ಗ್ರಾಮೀಣ,ಯಾದಗಿರಿ ಜಿಲ್ಲೆಯ ಶಹಪುರ, ಜೇವರ್ಗಿ, ಹುಣಸಗಿ ತಾಲೂಕಗಳಿಗೆ ಶಾಶ್ವತ ನೀರಾವರಿ ಯೋಜನೆ ಹಾಗೂ ಗುಲ್ಬರ್ಗಕ್ಕೆ ಕುಡಿಯುವ ನೀರು ಯೋಜನೆ ಕಳೆದ 40 ವರ್ಷಗಳ ಹಿಂದೆ ಎರಡು ಬೆಳೆ ಬೆಳೆಯಲು ನೀರು ಇದ್ದಿದ್ದು ಈಗ ಇಲ್ಲಾ ಹಾಗೂ ಲಕ್ಷಾಂತರ ಹೆಕ್ಟರ್ ಬರಡು ಭೂಮಿಗೆ ಶಾಶ್ವತ ನೀರಾವರಿ ಯೋಜನೆ, ಆರೋಗ್ಯ ಹಾಗೂ ಶೈಕ್ಷಣಿಕವಾಗಿ

ಏಮ್ಸ್ ರಾಯಚೂರು ಜಿಲ್ಲೆಯಲ್ಲಿ ನಿರ್ಮಾಣವಾಗಬೇಕೆಂದು ಕಂಕಣಬದ್ಧರಾಗಿ ಮಾಜಿ ಸಚಿವರಾದ ಕೆ ಶಿವನಗೌಡ ನಾಯಕ ನಿಂತಿದ್ದಾರೆ.

ಕೆಎಸ್ ಎನ್ ಸೇವಾ ಸಂಸ್ಥೆಯು ಮಾಜಿ ಸಚಿವ ಕೆ.ಶಿವನಗೌಡ ನಾಯಕ್ ಅವರ ಹುಟ್ಟಿದ ದಿನವನ್ನು ಹುಟ್ಟುಹಬ್ಬವನ್ನಾಗಿ ಪ್ರತಿ ವರ್ಷ ವಿಭಿನ್ನ, ವಿಶಿಷ್ಟ ಸಾಮಾಜಿಕವಾಗಿ ತಮ್ಮ ಹುಟ್ಟು ಹಬ್ಬದಂತೆ ವಿವಿಧ ಕಾರ್ಯಕ್ರಮಗಳು,ರಕ್ತದಾನ ಶಿಬಿರ,ನೇತ್ರಾ ತಪಾಸಣೆ ಮಾಡುವ ಮೂಲಕ ಆಚರಣೆ ಮಾಡುವ ಮಾಜಿ ಸಚಿವರಾದ ಕೆ.ಶಿವನಗೌಡ ನಾಯಕ್ ಅವರು ಕೊನೆಯ ವರ್ಷ ತಮ್ಮ ಹುಟ್ಟು ಹಬ್ಬ ಆಚರಣೆ ವೇಳೆ ಹೇಳಿದಂತೆ ಸರ್ವಧರ್ಮ ಸಾಮೂಹಿಕ ವಿವಾಹ ಮಾಡಿಸಿದ ಧೀಮಂತ ನಾಯಕ, ಈಗ ಈ ವರ್ಷ ತಮ್ಮ ಹುಟ್ಟು ಹಬ್ಬದ ದಿನ ಸಾಮಾಜಿಕವಾಗಿ ಹಾಗೂ ರೈತರಿಗೆ ಅನುಕೂಲವಾಗುವ ದೃಷ್ಟಿಯನ್ನು ಇಟ್ಟುಕೊಂಡು ಶಾಶ್ವತ ನೀರಾವರಿ ಯೋಜನೆಗಳ ಬಗ್ಗೆ ಪಕ್ಷಾತೀತವಾಗಿ ಬೃಹತ್ ಜನಾಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಂಡು ಆ ಬೃಹತ್ ಕಾರ್ಯಕ್ರಮದಲ್ಲಿ ಹಕ್ಕುತ್ತಾಯ ಮಂಡನೆ ಮಾಡಬೇಕು ಎನ್ನುವ ಸಂಬಂಧ ಈ ವರ್ಷ ಸರಳ ರೀತಿಯಲ್ಲಿ ಹುಟ್ಟುಹಬ್ಬ ಆಚರಣೆ ಮಾಡಿಕೊಂಡು ಮುಂದಿನ ಕೆಲವೇ ದಿನಗಳಲ್ಲಿ ಬೃಹತ್ ಜನಾಂದೋಲನ ಕಾರ್ಯಕ್ರಮವನ್ನು ಕೆ ಎಸ್ ಎನ್ ಸೇವಾ ಸಂಸ್ಥೆ ವತಿಯಿಂದ ಮಾಡಿ ಸಾರ್ಥಕ ಮನೋಭಾವ ತುರುವ ದೃಷ್ಟಿಯನ್ನು ಇಟ್ಟುಕೊಂಡಿದ್ದಾರೆ.

**ನವಲಿ ಜಲಾಶಯ**


**ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವಂತಹ ಯೋಜನೆಯಾಗಿತ್ತು ಎಲ್ಲಾ ಪಕ್ಷಗಳು ಅಧಿಕಾರಕ್ಕೆ ಬಂದರೂ ಕೂಡ ಈ ಯೋಜನೆ ಮುನ್ನಲೆಗೆ ಬರಲೇ ಇಲ್ಲ ಕೆಲವ್ರೊಂದು ಬಾರಿ ಮುನ್ನಡೆಗೆ ಬಂದರೂ ಕೂಡ ಜಾರಿಯಾಗಲಿಲ್ಲ ಇದನ್ನು ತಮ್ಮ ಮನದಲ್ಲಿಟ್ಟುಕೊಂಡಿರುವ ಕೆ. ಶಿವನಗೌಡ ನಾಯಕ ಅವರು ಈ ನವಿಲು ಜಲಾಶಯ ನಿರ್ಮಾಣದಿಂದ ರಾಯಚೂರು ಜಿಲ್ಲೆಯ ಸಿಂಧನೂರು, ಮಾನ್ವಿ ,ಸಿರಿವಾರ, ಮಸ್ಕಿ, ರಾಯಚೂರು ಗ್ರಾಮೀಣ, ಭಾಗಶಃ ದೇವದುರ್ಗ ತಾಲ್ಲೂಕು ಅಷ್ಟೇ ಅಲ್ಲದೆ ಕೊಪ್ಪಳ ಜಿಲ್ಲೆಯ ಗಂಗಾವತಿ, ಕಾರಟಗಿ,ಕನಕಗಿರಿ ತಾಲೂಕುಗಳ ಬರಡು ಭೂಮಿಗೆ ಶಾಶ್ವತ ನೀರಾವರಿ ಸಿಕ್ಕಂತಾಗುತ್ತದೆ ಈ ದೃಷ್ಟಿಯಿಂದ ಅತೀ ಹೆಚ್ಚು ನವಿಲು ಜಲಾಶಯದ ಮೇಲೆ ಅದನ್ನು ಜಾರಿಗೆ ತರುವವರಿಗು ಕೂಡ ಸರಿಯಾಗಿ ನಿದ್ದೆ ಮಾಡುವುದಿಲ್ಲ ಎನ್ನುವ ಜಪ ಮಾಡುತ್ತಿರುವ ಕೆ.ಶಿವನಗೌಡ ನಾಯಕ ಅವರು ಈ ಬಾರಿಯ ಜನಾಂದೋಲನ ಕಾರ್ಯಕ್ರಮದಲ್ಲಿ ಐತಿಹಾಸಿಕ ನೂರು ಹೆಜ್ಜೆ ಹಾಕಿ ಕಾರ್ಯಕ್ರಮದಲ್ಲಿ ಸಮಗ್ರ ನೀರಾವರಿಗಾಗಿ ಹಾಕ್ಕೋತ್ತಾಯ ಮಂಡನೆ ಮಾಡಲು ಪಣತೊಟ್ಟಿದ್ದಾರೆ.**



## ಜುಲೈ 14: ಕೆ.ಶಿವನಗೌಡ ನಾಯಕ ಅವರ 48ನೇ ಹುಟ್ಟುಹಬ್ಬ

ಜಿಲ್ಲೆಯ ಕೆ ಎಸ್ ಎನ್ ಸಾಮಾಜಿಕ ಸೇವಾ ಸಂಸ್ಥೆ ಕಳೆದ ಒಂದು ದಶಕದಿಂದಲೂ ಕೂಡ ಸಾಮಾಜಿಕ ಕಳಕಳಿಯುಳ್ಳ ಕಾರ್ಯಗಳನ್ನ ಮಾಡುತ್ತಾ ಬಂದಿದ್ದೆ,ಅದರ ಮುಂದುವರೆದ ಭಾಗವಾಗಿ ಪಕ್ಷಾತೀತವಾಗಿ ಸಾಮಾಜಿಕ ಬದ್ಧತೆಯುಳ್ಳ ರಾಜಕಾರಣಿ ಮಾಜಿ ಸಚಿವರಾದ ಕೆ.ಶಿವನಗೌಡ ನಾಯಕ ಅವರ ಹುಟ್ಟುಹಬ್ಬ ಜುಲೈ 14ರಂದು ಇದ್ದು ಸರಳವಾಗಿ ಹಾಗೂ ಸಾಮಾಜಿಕವಾಗಿ ಆಚರಣೆ ಮಾಡುತ್ತಿದ್ದಾರೆ ಆದರೆ ಅದರ ಪ್ರಯುಕ್ತ ರಾಯಚೂರು ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಸಾಮಾಜಿಕ ಹಿತದೃಷ್ಟಿಯಿಂದ ಅವರ ಹುಟ್ಟುಹಬ್ಬವನ್ನು ಮುಂದುವೆಚ್ಚ ಕರ್ಮ ಮಾಡಿ ಆಡಂಬರ ಮಾಡದೆ ಅದೇ ಖರ್ಚಿನಲ್ಲಿ ಸಾರ್ಥಕ ಮನೋಭಾವದಿಂದ ಆಚರಣೆ ಮಾಡಿ ಜಿಲ್ಲೆಯ ಸಮಗ್ರ ನೀರಾವರಿ ಹಾಗೂ ಏಮ್ಸ್‌ಗಾಗಿ ಹಾಕುತ್ತಾಯ ಮಂಡನೆ ಮಾಡಲು ನೂರು ಹೆಜ್ಜೆ ಹಾಕಿ, ಯಾವ ಸರ್ಕಾರದ ವಿರುದ್ಧವಲ್ಲದೆ ಪಕ್ಷಾತೀತವಾಗಿ, ವೈಯಕ್ತಿಕ ಸ್ವ ಪ್ರತಿಷ್ಠೆಗಾಗಿ ಅಲ್ಲದೇ ಸಾರ್ವಜನಿಕವಾಗಿ ಜನಾಂದೋಲನ ಕಾರ್ಯಕ್ರಮ ಮಾಡುವ ದೃಷ್ಟಿಯಿಂದ ಪ್ರಖ್ಯಾತ ಮಹಾರಾಷ್ಟ್ರ ಹಾಗೂ ಕರ್ನಾಟಕದ ಇಬ್ಬರ ಸ್ವಾಮೀಜಿಗಳ ಸಮ್ಮುಖದಲ್ಲಿ ನೀರಾವರಿ ಹಾಗೂ ಏಮ್ಸ್ ಬಗ್ಗೆ ಸಂಪೂರ್ಣ ವಿಷಯ ಮಂಡಿಸಿ ಹಾಕ್ಕೋತಾಯ ಮಾಡುವುದಾಗಿ ಪಣತೊಟ್ಟಿರುವ ಮಾಜಿ ಸಚಿವರಾದ ಕೆ.ಶಿವನಗೌಡ ನಾಯಕ ಅವರು ಜನ ಹಿತವೇ ನಮ್ಮ ಹಿತ ಎಂದು ತಿಳಿದು ಜುಲೈ 14ರಂದು ಸರಳವಾಗಿ ತಮ್ಮ ಹುಟ್ಟುಹಬ್ಬ ಆಚರಣೆ ಮಾಡಿಕೊಳ್ಳುತ್ತಿದ್ದಾರೆ.

## ತಿಂಥಣಿ ಬ್ರಿಡ್ಜ್ ನಿರ್ಮಾಣದ ಯೋಜನೆಗೆ ಕಂಕಣ



ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಬರಡು ಭೂಮಿ ಹಾಗೂ ಯಾದಗಿರಿ,ಸುರಪುರ, ಶಹಪುರ, ಜೇವರ್ಗಿ ಹಾಗೂ ಗುಲ್ಬರ್ಗಕ್ಕೆ ಕುಡಿಯುವ ನೀರು ಸಿಗುತ್ತವೆ ಇಂತಹ ಮಹತ್ತರ ಯೋಜನೆ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವುದರಿಂದ ಅದನ್ನು ಸರ್ಕಾರದ ಕಣ್ಣು ತೆರಿಸುವ ಪ್ರಯತ್ನ ಮಾಡುವ ನಿಟ್ಟಿನಲ್ಲಿ ಕೆಲವೇ ದಿನಗಳಲ್ಲಿ ನಡೆಯುವ ಬೃಹತ್ ಜನಾಂದೋಲನ ಕಾರ್ಯಕ್ರಮದಲ್ಲಿ ಹಾಕ್ಕೋತ್ತಾಯ ಮಂಡನೆ ಮಾಡಲು ಪಣತೊಟ್ಟಿದ್ದಾರೆ...

## ಏಮ್ಸ್ ಜಾರಿಗೆ ಪಣ

ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ಜಿಲ್ಲೆ ಎಂಬ ಹಣೆಪಟ್ಟಿ ಹೊಂದಿರುವ ರಾಯಚೂರು ಜಿಲ್ಲೆ ಹಾಗೂ ಪಕ್ಕದಲ್ಲಿರುವ ಜಿಲ್ಲೆಯಲ್ಲೂ ಅಪೌಷ್ಟಿಕತೆಯಿಂದ ನರಳುವವರ ಸಂಖ್ಯೆ ಹೆಚ್ಚಾಗಿದ್ದು ಅದರ ಪರಿಣಾಮವಾಗಿ ತಾಯಿ ಮತ್ತು ಶಿಶುಗಳ ಮರಣ ಪ್ರಮಾಣ ಹೆಚ್ಚಾಗುತ್ತಿವೆ, ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಮೊದಲ ಹೆಜ್ಜೆಯಾಗಿ ರಾಯಚೂರಿಗೆ ಏಮ್ಸ್ ಮಂಜೂರು ಆಗಲೇಬೇಕು ಹಾಗಾಗಿ ಏಮ್ಸ್ ಅಂತಹ ದೊಡ್ಡ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಅಪೌಷ್ಟಿಕತೆಯನ್ನು ತಪ್ಪಿಸಬಹುದು,ಆರ್ ಟಿ ಪಿ ಎಸ್ ಮತ್ತು ವೈ ಟಿ ಪಿ ಎಸ್ ಉಷ್ಣ ವಿದ್ಯುತ್ ಸ್ಥಾವರಗಳಿಂದ ನಿರಂತರವಾಗಿ ಹೊರ ಬೀಳುತ್ತಿರುವ ಹಾರೋ ಬೂದಿ ಗಾಳಿಯಲ್ಲಿ ಸೇರಿಕೊಂಡು ಜನರಲ್ಲಿ ಶ್ವಾಸಕೋಶ ಸಂಬಂಧಿತ ರೋಗಗಳು ಹೆಚ್ಚಾಗಿ ಬರುತ್ತಿದ್ದು ಹಾಗೂ ಮುಂದೆ ಬರುವ ಸವಾಲುಗಳನ್ನು ಎದುರಿಸಲು ರಾಯಚೂರು ಜಿಲ್ಲೆಗೆ ಏಮ್ಸ್ ಬೇಕೆಂದು ಕೆ ಎಸ್ ಎನ್ ಸೇವಾ ಸಂಸ್ಥೆ ಹಾಗೂ ಕೆ. ಶಿವನಗೌಡ ನಾಯಕ ಅವರು ಪಣತೊಟ್ಟಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H